ಎಕ್ಸೆಲ್ ಪಬ್ಲಿಕ್ ಸ್ಕೂಲ್

# ಕನ್ನಡ ವಾರ್ತಾಪತ್ರಿಕೆ 2023



**Excelsior** *Ever upward*

## ಕನ್ನಡ ಹಬ್ಬ – ನಮ್ಮ ಕನ್ನಡ ನಮ್ಮ ಹೆಮ್ಮೆ



ಚಿತ್ರ ಕೃಪೆ: ಧೃತಿ ಸುರೇಶ್, 8ನೆಯ ತರಗತಿ 'ಇ' ವಿಭಾಗ

ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣವಾಗಿ 50 ವರ್ಷಗಳು ಪೂರ್ಣಗೊಂಡ ಸುವರ್ಣ ಮಹೋತ್ಸವದ ಸುಸಂದರ್ಭದಲ್ಲಿ ಕರ್ನಾಟಕ ರಾಜ್ಯವು 'ಕರ್ನಾಟಕ ಸಂಭ್ರಮ 50' "ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಎಂಬ ಶೀರ್ಷಿಕೆಯಡಿ ಕನ್ನಡ ರಾಜ್ಯೋತ್ಸವದ ಆಚರಣೆಯನ್ನು ವಿಶೇಷವಾಗಿ ಆಚರಿಸುತ್ತಿದೆ. ಅಂತೆಯೇ ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಗೆ ಹದಿನೈದು ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಯನ್ನು 'ಕನ್ನಡ ಹಬ್ಬ' 'ನಮ್ಮ ಕನ್ನಡ ನಮ್ಮ ಹೆಮ್ಮೆ' ಎಂಬ ಶೀರ್ಷಿಕೆಯಡಿ ವೈವಿಧ್ಯಮಯವಾಗಿ, ವರ್ಣಮಯವಾಗಿ ಹಾಗೂ ಅರ್ಥಪೂರ್ಣವಾಗಿ ಆದರಿಸಲಾಯಿತು.

ದಿನಾಂಕ 4.11.2023ನೆ ಶನಿವಾರ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ನಾಡಿನ ಹೆಸರಾಂತ ಗಾಯಕಿ ಶ್ರೀಮತಿ ಎಚ್ ಆರ್ ಲೀಲಾವತಿ ಅವರು ಆಗಮಿಸಿದ್ದರು. ನಮ್ಮ ಶಾಲೆಯ ಆಡಳಿತಾಧಿಕಾರಿಗಳಾದ ಕರ್ನಲ್ ಚೇತನ್ ಅವರು, ಪ್ರಾಂಶುಪಾಲರಾದ ಶ್ರೀಯುತ ಮ್ಯಾಥ್ಯೂ ಕೆ ಜಿ ಅವರು ಹಾಗೂ ಸಂಪರ್ಕ ಅಧಿಕಾರಿಗಳಾದ ಶ್ರೀಯುತ ಪ್ರಶಾಂತ್ ಹೆಚ್ ಎಮ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ವೀಣಾ ವೈ ಸಿ ಅವರು ನಡೆಸಿಕೊಟ್ಟರು. ಕರ್ನಲ್ ಚೇತನ್‌ರವರು ನೆರೆದ ಜನಸ್ತೋಮವನ್ನು ಸ್ವಾಗತಿಸಿದರು. ಕುಮಾರಿ ಭಾವ್ನಿ ಡಿ ಕಾಟ್ಕರ್ ಎಂಬ ವಿದ್ಯಾರ್ಥಿನಿ ಕನ್ನಡ ನಾಡು–ನುಡಿ ಸಂಸ್ಕೃತಿಯ ಮಹತ್ವವನ್ನು ಕುರಿತು ಮಾತನಾಡಿದರು. ಶ್ರೀಮತಿ ವೀಣಾ ಆರ್ ಅವರು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಮುಖ್ಯ ಅತಿಥಿಗಳಾದ ಶ್ರೀಮತಿ ಹೆಚ್ ಆರ್ ಲೀಲಾವತಿ ಅವರು ಎಕ್ಸೆಲ್ ಪಬ್ಲಿಕ್ ಶಾಲೆಯು ಶಿಕ್ಷಣ ನೀಡುತ್ತಿರುವ ವಿಶೇಷ ಬಗೆ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಬಾಂಧವ್ಯ, ಶಾಲೆಯಲ್ಲಿರುವ ವಿಶೇಷ ಸವಲತ್ತುಗಳು, ಶಾಲಾ ಆವರಣದ ಸೌಂದರ್ಯ, ಇಲ್ಲಿ ನಡೆಸುವ ಚಟುವಟಿಕೆಗಳ ಬಗ್ಗೆ ಮಾತನಾಡಿ ಕನ್ನಡಕ್ಕೆ ಇಲ್ಲಿ ನೀಡಿರುವ ಮಹತ್ವದ ಸ್ಥಾನವನ್ನು ತಿಳಿಸಿ, ಪೋಷಕರಿಗೂ ಕೂಡ ಮಕ್ಕಳಿಗೆ ಕನ್ನಡ ಮಾತನಾಡಲು ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆಯ ಅರಿವು ಮೂಡುವಂತೆ ಮಾತನಾಡಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಸಭಾ ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ಕಾವ್ಯ ಬಿ ಎಸ್ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ನಮ್ಮ ಶಾಲೆಯಲ್ಲಿ ಹಂಪಿ ಕಲ್ಲಿನ ರಥದ ಸ್ತಬ್ಧಚಿತ್ರವನ್ನು ಒಳಗೊಂಡಂತೆ ಕನ್ನಡದ ಕೆಲವು ಖ್ಯಾತ ಸಾಹಿತಿಗಳು, 2023 ನೇ ಸಾಲಿನ ಪದ್ಮ ಪ್ರಶಸ್ತಿ ವಿಜೇತರು ಮತ್ತು ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದ ದಿಗ್ಗಜರ ಚಿತ್ರಗಳನ್ನೊಳಗೊಂಡ ದೊಡ್ಡ ಫಲಕಗಳನ್ನು ಶಾಲೆಯ ಪ್ರವೇಶ ದ್ವಾರದಲ್ಲಿ ಆಕರ್ಷಕವಾಗಿ ಅನಾವರಣಗೊಳಿಸಲಾಗಿತ್ತು.

ಸಭಾ ಕಾರ್ಯಕ್ರಮದ ತರುವಾಯ, ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಸ್ತುತಪಡಿಸಲ್ಪಟ್ಟವು. "ಕನ್ನಡ ಹಬ್ಬ" ಎಂಬುದನ್ನು ಮುಖ್ಯ ವಿಷಯವಾಗಿ ಇಟ್ಟುಕೊಂಡು ಭರತನಾಟ್ಯ, ಸಮೂಹ ಗಾಯನ, ಜಾನಪದ ಮತ್ತು ಹಬ್ಬಗಳು, ಸಮುದಾಯ ಮತ್ತು ವೃತ್ತಿಪರ ನೃತ್ಯ, 1973 ರಿಂದ 2023ರ ವರೆಗಿನ ಕನ್ನಡ ಸಿನಿಮಾ ರಂಗ, ತೊಗಲುಗೊಂಬೆ ಆಟ, ಶಾಲೆಗಳಲ್ಲಿ ವಿದ್ಯಾರ್ಥಿಗಳು – ಶಿಕ್ಷಕರಿಂದ ಆಚರಿಸಲ್ಪಡುವ ಕನ್ನಡ ರಾಜ್ಯೋತ್ಸವ ಮತ್ತು ಜಾನಪದ ಜಾತ್ರೆ ಎಂಬ ವಿಷಯಗಳನ್ನಾಧರಿಸಿ ನೃತ್ಯ, ಗಾಯನ ಮತ್ತು ನಾಟಕ ರೂಪಗಳಲ್ಲಿ ವಿದ್ಯಾರ್ಥಿಗಳು ಸುಂದರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕರ್ನಾಟಕದ ವಿವಿಧ ಪ್ರಾಂತ್ಯವಾರು ಭಾಷಾ ಶೈಲಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರೂಪಿಸಲಾಯಿತು. ವರುಣನ ಕಣ್ಣಮುಚ್ಚಾಲೆ ಆಟದ ನಡುವೆಯೂ ಕಾರ್ಯಕ್ರಮವು ಸೊಗಸಾಗಿ ಮೂಡಿ ಬಂತು.

# ಅತಿಥಿ ಭಾಷಣ



ಮುಖ್ಯ ಅತಿಥಿಗಳು

**ವಿದುಷಿ ಎಚ್ ಆರ್ ಲೀಲಾವತಿ**

(ಗಾಯಕಿ, ಸಂಗೀತ ಸಂಯೋಜಕಿ ಹಾಗೂ ಲೇಖಕಿ)

ವೇದಿಕೆಯಲ್ಲಿರುವ ಸನ್ಮಾನ್ಯರೇ, ಸಭಾಂಗಣದಲ್ಲಿರುವ ಪೋಷಕರೇ, ಶಾಲೆಯ ಆಡಳಿತ ವರ್ಗದವರೇ, ಗುರುಗಳೇ ಹಾಗೂ ಶಿಷ್ಯವೃಂದವೇ ಎಲ್ಲರಿಗೂ ನನ್ನ ಸತ್ ಪ್ರೇಮದ ಪ್ರಣಾಮಗಳು ಮತ್ತು ಮಕ್ಕಳಿಗೆ ಆಶೀರ್ವಾದಗಳು. ನಾವು ಕನ್ನಡ ರಾಜ್ಯೋತ್ಸವದ ಸಂಭ್ರಮದಲ್ಲಿದ್ದೇವೆ. ಇದು ಬಹಳಷ್ಟು ಸಂದೇಶ ನೀಡುವ ದಿನ. ಇದು ಕರ್ನಾಟಕ ರಾಜ್ಯ, ಕನ್ನಡತಾಯಿ ನಮ್ಮತಾಯಿ. ಕನ್ನಡಭಾಷೆ ನಮ್ಮಭಾಷೆ. ಕನ್ನಡತಾಯಿಯ ನೆನೆಯುವ ಸಂದರ್ಭ ಈ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಮೂಲಕ ನನಗೆ ದೊರೆತಿರುವುದು ನನ್ನ ಭಾಗ್ಯ ಎಂದು ಹೇಳುತ್ತಾ, ಮತ್ತೆ ಎಕ್ಸೆಲ್ ಪಬ್ಲಿಕ್ ಶಾಲೆ ಎಂಬುದು ಒಂದು ಸಾರ್ವಜನಿಕ ಶಾಲೆ. ಅದರ ಹೆಸರು ಎಕ್ಸೆಲ್ ಎಂಬುದು ಏನು ಸೂಚಿಸುತ್ತದೆ ಎಂದರೆ ಶಾಲೆಯಲ್ಲಿ ನಡೆಯುವ ಎಲ್ಲಾ ಕೆಲಸಗಳಿಂದ ಜ್ಞಾನ ಪಡೆಯುವುದು ಒಂದು ಸಾಮೂಹಿಕ ಮಾಧ್ಯಮವಾಗಿ ಎಕ್ಸೆಲ್ ಮಕ್ಕಳನ್ನು ರೂಪಿಸುವುದರಲ್ಲಿ, ಸರ್ವಾಂಗೀಣ ವ್ಯಕ್ತಿತ್ವವನ್ನು ಬೆಳಕಿಗೆ ತರುವುದರಲ್ಲಿ ಶಾಲೆಯು ಬಹಳಷ್ಟು ಸೇವೆ ಮಾಡುತ್ತಿದೆ. ಪ್ರಾಯಶಃ 15 ವರ್ಷಗಳಲ್ಲಿ ಈ ಶಾಲೆಯ ಕೀರ್ತಿ ಶಿಖರದ ಎತ್ತರಕ್ಕೇರಿರುವುದು ನನಗೆ ಕಾಣುತ್ತಿದೆ. ಎಲ್ಲಿ ಗರ್ವ ತಲೆಯಲ್ಲಿರುತ್ತದೋ ಅಲ್ಲಿ ಸಾಧನೆ ಕಡಿಮೆ. ಪ್ರಾಯಶಃ ಮೈಸೂರಿನ ಬೇರೆ ಬೇರೆ ಕಡೆಯಿಂದ ಮಕ್ಕಳು ಶಾಲೆಗೆ ಬರುತ್ತಿರುವುದನ್ನು ನೋಡಿದರೆ ಈ ಶಾಲೆಯ ಕೀರ್ತಿ, ಮಹತ್ವ, ಧ್ಯೇಯ ಮುಖ್ಯವಾದದ್ದು. ನಮ್ಮ ಭಾರತೀಯ ಸತ್ಕಾರ, ಸಂಸ್ಕೃತಿ, ತತ್ವಗಳನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಪ್ರಾಯಶಃ ಇಲ್ಲಿ ಏನಿದೆ ಎಂದು ಕೇಳುವುದಕ್ಕೆ ಮುಂಚೆ ಇಲ್ಲಿ ಏನಿಲ್ಲ ಎಂದು ಕೇಳಬೇಕಾಗಿದೆ. ಸಂಗೀತ, ನೃತ್ಯ, ಚಿತ್ರಕಲೆ, ವಿಜ್ಞಾನ, ಕ್ರೀಡೆ, ಯೋಗದಂತಹ ಎಲ್ಲಾ ಸ್ವರೂಪದ ಪಾಠವನ್ನು ಮನದಟ್ಟು ಮಾಡುವ ಮೂಲಕ ಜ್ಞಾನ ನೀಡುತ್ತಿದೆ. ಅದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪ್ರಯತ್ನಿಸುತ್ತಿದೆ. ಮಕ್ಕಳ ಪ್ರತಿಭೆ ಮತ್ತು ಅವರ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಅವರಿಗೆ ಏನು ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳಲು ಪ್ರಾಧಾನ್ಯತೆ ಕೊಡುತ್ತಾರೆ. ಯೋಗದ ಮೂಲಕ ಮನಸ್ಸಿನ ಕೇಂದ್ರೀಕರಣಕ್ಕೆ ಸಹಾಯ ಮಾಡುತ್ತಿದ್ದಾರೆ. ಈ ಶಾಲೆಯು ಪರಿಸರಕ್ಕೆ ತುಂಬಾ ಬೆಲೆ ಕೊಡುತ್ತದೆ. ಇದರಿಂದ ದಸರಾದಲ್ಲಿ ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿದೆ. ಸ್ವಚ್ಛತೆಗೆ ಮೊದಲ ಆದ್ಯತೆ ಕೊಟ್ಟಿದೆ. ಕಣ್ಣಾಡಿಸಿದಲ್ಲೆಲ್ಲಾ ಶುಭ್ರ ವಾತಾವರಣ ಕಾಣಬಹುದು.

ಈ ಶಾಲೆಯನ್ನು ಆರಂಭ ಮಾಡಿದ ಧನಂಜಯ ಅವರು ಮತ್ತು ಸುಧನ್ವ ಅವರು ಹಾಗೂ ಹಲವಾರು ಆಡಳಿತ ಮಂಡಳಿಯವರು ತಮ್ಮದೇ ತಂತ್ರಜ್ಞಾನದ ಮೂಲಕ ಈ ಶಾಲೆಯನ್ನು ಜ್ಞಾನ ಮಂದಿರ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದ್ದಾರೆ. ಇದೆಲ್ಲವನ್ನು ನೋಡಿದರೆ ನನಗೆ ಗುರುಕುಲ ನೆನಪಾಗುತ್ತದೆ. ಗುರುಕುಲದಲ್ಲಿ ಹಲವಾರು ವರ್ಷಾನುಗಟ್ಟಲೇ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಎಲ್ಲಾ ವಿದ್ಯೆಗಳನ್ನು ಕಲಿಸಿ ಆಶೀರ್ವಾದ ಮಾಡಿ ಕಳುಹಿಸುತ್ತಾರೆ. ಎಷ್ಟೋ ವಿದ್ಯೆಗಳನ್ನು ಕಲಿಸಿ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿರುವ ಈ ಎಕ್ಸೆಲ್ ಪಬ್ಲಿಕ್ ಶಾಲೆಯು ನಮ್ಮ ಮೈಸೂರಿನಲ್ಲಿ ಇದೆ ಎಂಬುದೇ ಸಂತೋಷಕರ ವಿಷಯವಾಗಿದೆ. ಇಲ್ಲಿರುವ ಶಿಕ್ಷಕರು ಮಕ್ಕಳನ್ನು ತಮ್ಮ ಮನೆಯ ಮಕ್ಕಳಂತೆ ಪ್ರೀತಿಸಿ ವಿದ್ಯೆ ಕಲಿಸುತ್ತಿರುವುದು ತುಂಬಾ ವಿಶೇಷವಾದದ್ದು. ಇದರಿಂದಾಗಿ ಈ ಶಾಲೆಯು ಮೈಸೂರಿನಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ರಾಜ್ಯದಲ್ಲಿ ಮೂರನೆಯ ಸ್ಥಾನವನ್ನು, ಭಾರತದಲ್ಲಿ 7ನೆಯ ಸ್ಥಾನವನ್ನು ಪಡೆದಿದ್ದು ನಮ್ಮ ಹೆಮ್ಮೆಗೆ ಪಾತ್ರವಾಗಿದೆ.

ಮಕ್ಕಳು ವಿದ್ಯೆಯ ಜೊತೆಗೆ ಕಲೆ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು. ಮುಂದೆ ನಾವು ಏನೇ ಕೆಲಸಕ್ಕೆ ಸೇರಿದರೂ ಮಾನಸಿಕ ನೆಮ್ಮದಿಗಾಗಿ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಮುಂದೆ ವಯಸ್ಸಾದ ಮೇಲೆ ಜೀವನ ನಿಸ್ಸಾರವಾಗುತ್ತದೆ. ಆದ್ದರಿಂದ ಸಂಗೀತ, ಕಲೆ, ನೃತ್ಯ, ಸಾಹಿತ್ಯದ ಬಗ್ಗೆ ಒಳ್ಳೆಯ ಹವ್ಯಾಸ ಅಳವಡಿಸಿಕೊಂಡರೆ ಅದು ನಿಮ್ಮ ಜೀವನದ ದಾರಿದೀಪವಾಗುತ್ತದೆ. ನಿಮ್ಮ ಗುರುಹಿರಿಯರು ದೀಪ ಹಚ್ಚಿದ್ದಾರೆ. ಆ ದಾರಿದೀಪದ ಬೆಳಕಿನಲ್ಲಿ ಭವ್ಯ ಭವಿಷ್ಯವನ್ನು ರೂಪಿಸಿಕೊಳ್ಳಿ. ಅಕ್ಕಪಕ್ಕದವರನ್ನು ಪ್ರೀತಿಸಿ. ಪ್ರೀತಿಯೇ ನಿಮ್ಮ ಧ್ಯೇಯವಾಗಬೇಕು. ಇಡೀ ಪ್ರಪಂಚವನ್ನೇ ಪ್ರೀತಿಸುವಂತಾಗಬೇಕು. ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ನಿರಂತರವಾಗಿ ಕಲಿಯುತ್ತಾ ಎಲ್ಲಾ ಸದ್ವಿದ್ಯೆಗಳನ್ನು ನಿಮ್ಮದಾಗಿಸಿಕೊಳ್ಳಿ. ಒಳ್ಳೆಯ ಎತ್ತರಕ್ಕೆ ಬೆಳೆದು ಹೆಸರು ಪಡೆಯಿರಿ. ಮುಖ್ಯವಾಗಿ ನಮ್ಮ ನಾಡಿನಲ್ಲಿ ಕನ್ನಡ ನಮ್ಮ ಪ್ರಾಣವಾಗಬೇಕು. ಅನ್ಯಭಾಷಿಗರು ಯಾರಿದ್ದೀರಾ ನೀವು ದಯಮಾಡಿ ಇಲ್ಲಿ ನೆಲೆಸಿದ ಮೇಲೆ ನೀವು ಕನ್ನಡ ಕಲಿಯಿರಿ. ಕನ್ನಡಿಗರಿಗೆ ನಾವು ಕುಡಿಯುವ ನೀರು, ಗಾಳಿ ಕನ್ನಡವಾಗಬೇಕು. ಕನ್ನಡಕ್ಕೆ ಪ್ರಥಮ ಸ್ಥಾನವಿರಲಿ. ಬೇರೆ ರಾಜ್ಯದವರನ್ನು ನೋಡಿದರೆ ಅವರು ತಮ್ಮ ಭಾಷೆಯನ್ನು ತುಂಬಾ ಪ್ರೀತಿಸುತ್ತಾರೆ. ಹಾಗೆ ನಮ್ಮ ನಾಡಿನಲ್ಲಿ ನಮ್ಮ ಭಾಷೆಯನ್ನು ಪ್ರೀತಿಸದಿದ್ದರೆ ಹೇಗೆ? ಆದ್ದರಿಂದ ಕನ್ನಡವನ್ನು ಚೆನ್ನಾಗಿ ಕಲಿತು ಮಾತನಾಡುತ್ತಾ ಖುಷಿಯಾಗಿರಿ. ಕನ್ನಡಿಗರು ತುಂಬಾ ವಿಶಾಲ ಹೃದಯದವರು. ಬೇರೆ ಭಾಷೆಯವರ ಭಾಷೆಯನ್ನು ಬೇಗ ಕಲಿತು ಬಿಡುತ್ತೇವೆ. ಆದರೆ ಬೇರೆ ಭಾಷೆಯವರು ತುಂಬಾ ವರ್ಷಗಳಿಂದ ನಮ್ಮ ನಾಡಿನಲ್ಲಿದ್ದರು ಕನ್ನಡ ಕಲಿಯುವ ಅನಿವಾರ್ಯತೆಯನ್ನು ಸೃಷ್ಟಿಸಿಲ್ಲ. ಆದ್ದರಿಂದ ಎಷ್ಟೇ ಭಾಷೆ ಕಲಿತರೂ, ನಮ್ಮ ಭಾಷೆಗೆ ಅಗ್ರಸ್ಥಾನ ನೀಡಿ. ಕನ್ನಡದಲ್ಲೇ ಮಾತನಾಡಿಸಿ ಅವರಿಗೆ ಕನ್ನಡ ಕಲಿಸಿ. ದಯಮಾಡಿ ಕನ್ನಡವನ್ನು ಮರೆಯಬೇಡಿ, ಬಿಡಬೇಡಿ. ತಂದೆತಾಯಂದಿರು ನಿಮ್ಮ ಮಕ್ಕಳೊಂದಿಗೆ ಕನ್ನಡ ಬಿಟ್ಟು ಇಂಗ್ಲೀಷಿನಲ್ಲಿ ಮಾತನಾಡಿಸಬೇಡಿ. ಕರ್ನಾಟಕದಲ್ಲಿ ನೆಲೆಸಿರುವ ಮಕ್ಕಳು ಎಲ್ಲೆಡೆ ಹೆಸರು ಗಳಿಸಿ ಚೆನ್ನಾಗಿರಲಿ. ಕನ್ನಡವೆಮ್ಮಯ ಮಾನ ಕನ್ನಡವೆಮ್ಮಯ

> "ಮುಖ್ಯವಾಗಿ ನಮ್ಮ ನಾಡಿನಲ್ಲಿ ಕನ್ನಡ ನಮ್ಮ ಪ್ರಾಣವಾಗಬೇಕು.
> ಅನ್ಯಭಾಷಿಗರು ಯಾರಿದ್ದೀರಾ?
> ಇಲ್ಲಿ ನೆಲೆಸಿದ ಮೇಲೆ ನೀವು ದಯಮಾಡಿ ಕನ್ನಡ ಕಲಿಯಿರಿ."

# ಸ್ವರಾಜ್ಯ – ಸುರಾಜ್ಯ

**ಚಿತ್ರ ಕೃಪೆ: ತನ್ಮಯಿ ಹೆಚ್ ಎ**
೯ನೆಯ ತರಗತಿ 'ಸಿ' ವಿಭಾಗ




ಬ್ರಿಟಿಷರ ಕುತಂತ್ರ
ತೊಲಗಿ, ಸಿಕ್ಕಿತು ಸ್ವಾತಂತ್ರ್ಯ
ಏಕತೆಯೇ ನಮ್ಮ ಮಂತ್ರ
ಇದೇ ಬಹು ದೊಡ್ಡ ತಂತ್ರ

ಮುನ್ನೂರು ವರ್ಷಗಳ ಹೋರಾಟ
ನಮಗೆ ಕೊಟ್ಟರು ತಡೆಯಲಾರದಷ್ಟು ಕಾಟ
ನಡೆಯಿತು ನಮ್ಮಲ್ಲಿಯೇ ಕಾದಾಟ
ನಾವು ಕಲಿತೆವು ಸಹಬಾಳ್ವೆಯ ಪಾಠ

ಗುಲಾಮಿತನದಲ್ಲಿ ಮುಸುಕಿತ್ತು ದೇಶ
ಮಾಡಿದರು ಭಾರತವನ್ನು ನಾಶ
ಜನರಿಗಿತ್ತು ಸ್ವಾತಂತ್ರ್ಯದ ಆಶ
ಹೋರಾಟದ ಸಿಟ್ಟಿನ ರೋಷ

ಕೊನೆಗೂ ಸಿಕ್ಕಿತು ಬಿಡುಗಡೆ
ಆದರೆ ಏನೂ ಉಳಿದಿರಲಿಲ್ಲ ನಮ್ಮೆಡೆ
ಸಾಗಬೇಕಿತ್ತು ಹೊಸದಿಕ್ಕಿನೆಡೆ
ವಿಶ್ವವೇ ತಿರುಗಿ ನೋಡುವಂತೆ ನಮ್ಮೆಡೆ



ಈಗ ಸಿಕ್ಕಿದೆ ನಮಗೆ ವಿಶ್ವಗುರುವಿನ ಸ್ಥಾನ
ಚಂದ್ರನೆಡೆಗೆ ನಮ್ಮ ಯಾನ
ಸದೃಢ ಆರ್ಥಿಕತೆಯತ್ತ ನಮ್ಮ ಗಮನ
ಎಲ್ಲೆಲ್ಲೂ ನೆಲೆಸಲಿ ಶಾಂತಿ ಸಮೃದ್ಧತೆ ಸಮಾಧಾನ

**ಪ್ರೀತಂ ಎಸ್ ರಾವ್**
೧೦ನೆಯ ತರಗತಿ 'ಇ' ವಿಭಾಗ

# ನಾ ಕಂಡೆ


**ಚಿತ್ರ ಕೃಪೆ: ಆದ್ಯಾ ಎಸ್ ಕೆ**
೯ನೆಯ ತರಗತಿ'ಎ' ವಿಭಾಗ



ಎಂತಹ ಸುದಿನ
ಮಳೆ ಸುರಿವ ಅನುದಿನ
ಆದರೆ ತುಳುಕಿತು ಮನ
ಆಯಿತು ನಿಶ್ಶಬ್ದದ ಜನನ

ಓಡಿದೆ ಪ್ರಕೃತಿಯ ಮಡಿಲಿಗೆ ನಾ
ಬೇಸರದಿಂದ ಕೂಡಿತು ಮನ
ನಿಂತು ಹೋಯಿತು ಹಕ್ಕಿಗಳ ಗಾಯನ
ಕಂಡೆ ನಿಶ್ಶಬ್ದ ಜಗತ್ತಿನ ಮಿಲನ

ನಿಂತು ಹೋದವು ಜೀರುಂಡೆಗಳ ಚಿಲಿಪಿಲಿ
ಮರೆಯಾಗಿ ಹೋದವು ಬೇವಿನ ಎಲೆಯಲಿ
ನಿಶ್ಶಬ್ದವಾಯಿತು ರಭಸದಲ್ಲಿ ಹರಿಯುವ ಜಲ
ಇಡೀ ಜಗತ್ತಲ್ಲೇ ನಿಂತಿತು ಗದ್ದಲ



ಭಾರವಾಯಿತು ಹೃದಯ; ಕುಗ್ಗಿ ಹೋಯಿತು ಆತ್ಮ
ಕೂಗಿಕೊಂಡೆ ಅಯ್ಯೋ ಪರಮಾತ್ಮ
ಓಡಿ ಬಂದಳು ಅಮ್ಮ ಗಾಬರಿಯಲಿ
ಹಿಡಿದು ಕುರೂಪಿಯನು ಕೈಯಲಿ
ತಟ್ಟನೆ ಎದ್ದೆ ನಾ ಮಂಚದಿಂದ
ಹೊರ ಬಂದೆ ಈ ನನ್ನ ಕನಸಿನ ಲೋಕದಿಂದ

**ತನ್ವಿ ಗಿರೀಶ್**
೧೦ನೆಯ ತರಗತಿ'ಎ' ವಿಭಾಗ

# ಯಜ್ಞಸೇನಿ

ದ್ರುಪದಕನ್ಯೆಯ ಛಲವ ನೋಡೆಯ
ಮುಗಿಲ ತೀರದ ಆತ್ಮ ಜ್ಯೋತಿ
ಅಗ್ನಿಪುತ್ರಿಯ ಅಚಲ ಕಥೆಯಿದು
ಯುಗ-ಯುಗದಿ ಪಡೆದ ಕೀರ್ತಿ॥

ದ್ರುಪದ ರಾಯನ ಯಜ್ಞವೇದಿಯೊಳು
ವೀರಾಂಗನೆಯೊಬ್ಬಳ ಜನನ
ಯಾರು ಅರಿಯರು! ಯಾರು ತಿಳಿಯರು!
ಇದು ಹೊಸ ಯುಗಕೆ ಪಯಣ॥

ಕಮಲ ನಯನದ ಶಮಂಗಿಯಾಕೆ
ಕಾಲನೇತ್ರಿಯು ಯೋಜನಗಂಧೆ
ಶ್ಯಾಮಕೇಶವ ಧರಸಿ ಬಂದಳೋ
ಚೌರಶೀಲೆಯು ಈ ಅಯೋನಿಜೆ॥

ಆ ವಿಧಿಯ ಆಟದಿ, ದೈವ ಪಾಠದಿ
ಪಾಂಡವರೊಡನೆ ಶುಭ ಕಲ್ಯಾಣ
ಹಸ್ತಿನಾಪುರದ ಕುವರಿಯಾದಳೋ
ಭವ್ಯ ಸ್ವಾಗತ ಗ್ರಹಿಸಿ ಆರ್ಯಣ॥

ಶಕುನಿ ದುರ್ಯೋಧನರ ಕಪಟದಿ
ನಡೆಯಿತೋ ಚದುರಂಗದಾಟ
ಪಂಚ ಪಾಂಡವರು ಸೋತು ಕಳೆದರೋ
ರಾಜ್ಯ, ರಾಣಿಯ; ಎಂಥಾ ಛಲದಾಟ॥

ಎಳೆದು ತಂದನೋ ದುಷ್ಟ ದುಶ್ಯಾಸನ
ಹಿಡಿದು ಪಾಂಚಾಲಿಯ ಕೇಶವ
ಅತ್ತಿಗೆಯೆಂದು ನೋಡದ ಪಾಪಿಯವ
ಅಸಭ್ಯತೆಯ ಪರಮಾವಧಿ॥

ಈ ವಿಕೃತ ದೃಶ್ಯಕೆ ಸಾಕ್ಷಿ ಆಯಿತೋ
ಹಸ್ತಿನಾಪುರದ ರಾಜಸಭೆ
ವೀರ-ಶೂರರು ಕುಳಿತರೋ ಮೂಕರಾಗಿ
ಅತ್ಯಾಚಾರವ ತಡೆಯಲಾರದೆ॥

ಆಕೆಯ ಚೀರವ ಹಿಡಿದೆಳೆದನೊ
ಸಭೆಯ ಮುಂದೆ ವಸ್ತ್ರಹರಣ
ಕಂಡರೂ ತಲೆತಗ್ಗಿಸಿ ದುಃಖಿಸಿ
ಕಣ್ಣೀರಿಟ್ಟರು ಪಾಂಡವರು॥

ಕುರುಡರೇ ನೀವು! ಕಲ್ಲೃದಯಿಗಳೇ?
ಓರ್ವ ಸ್ತ್ರೀಯ ಅತ್ಯಾಚಾರವ
ಕಂಡು ಮನಕಲಕದೇ? ಹೇಳಿ, ಉತ್ತರಿಸಿ!
ಉದ್ಗರಿಸಿದಳೋ ಮನನೊಂದು॥

ಮಾಧವ ಕಾಪಾಡು! ಕೇಶವ ಕಾಪಾಡು!
ಬೇಡಿದಳೋ ಸಖನ ದ್ರೌಪದಿ
ಸಖಿಯ ಕೂಗು ಕೇಳಿ ಅಚ್ಯುತ
ದಿವ್ಯ ಲೀಲೆಯ ತೋರಿದ ಧರ್ಮದಿ॥

ಎಳೆದೆಳೆದು ಎಳೆದರೂ ತೀರದ
ಮುಗಿಯದ ವಸ್ತ್ರವ ದುಷ್ಟನು
ಎಳೆದು ದಣಿದು, ದಣಿದು ಎಳೆದು,
ಸೋತು ಬಿದ್ದ ಕ್ರೂರಿ ದುಶ್ಯಾಸನನು॥

ಅಕ್ಷಯವಸನವನಿತ್ತ ಜನಾರ್ಧನ,
ಭವ ಭಯ ಹರಣ, ನಾರಾಯಣ,
ರಕ್ಷಿಸಿದನೋ ತನ್ನ ಪ್ರಿಯ ಸಖಿಯ
ಪಾಲಿಸಿ ಪ್ರಾಣ-ಮಾನ॥

ಕಥೆಯು ಮುಗಿದ ಮರುಕ್ಷಣ
ಕ್ರೋಧದಿ ಮುನ್ನೆಡೆದು ಎಂದಳಾಕೆ -
ದುಷ್ಟ ದುಶ್ಯಾಸನನ ನೆತ್ತರಿನಿಂದ
ತೊಳೆಯದೆ ಕಟ್ಟೆನೀ ಕೇಶವ - ಬೆಂದಳಾಕೆ॥

ದ್ವಾದಶ ವರ್ಷಗಳ ವನವಾಸ ದೊರಕಿ
ತೊರೆದರು ಅರಮನೆಯನು
ಅರಣ್ಯಕೆ ನಡೆದು, ಸಾಧು ಜೀವನವ ಒಪ್ಪಿ,
ಒಪ್ಪಿ ಕಾಡಾನೆ ಮನೆಯನು॥

ಧೈರ್ಯಗೆಡದೆ, ಮುಂದಿಡುವ ಶಕ್ತಿ-ಸ್ಥೈರ್ಯ
ನೂರಾರು ಪರೀಕ್ಷೆಗಳ ಎದುರಿಸೆ
ವನವಾಸವ ಖುಷಿಯಾಗೆ ಮುಗಿಸಿದಳಾಕೆ
ವೀರಮಹಿಳೆ ದ್ರುಪದಕನ್ಯೆ॥

ನಂತರ ನಡೆದ ಕುರುಕ್ಷೇತ್ರ
ಮಹಾ ಯುದ್ಧದ ಎಡೆಯಲಿ
ಭೀಮಸೇನನು ಕೊಂದ ದುಶ್ಯಾಸನನ
ನೆತ್ತರ ಹರಿಸಿದ, ಮಾಡಿ ಬಲಿ॥

ಕೂದಲ ತೊಳೆದು, ದುಃಖವು ಅಳಿದು,
ಕೇಶವ ಕಟ್ಟಿದಳೋ ಪಾಂಚಾಲಿ
ಇನಿತು ನುಡಿದೆ ನಾ ಗೌರವದುಂಬಿ,
ಜಯ ಹೇ ಯಜ್ಞಸೇನಿ॥



**ಚಿತ್ರ ಕೃಪೆ: ಹೃದ್ಯಾ ಎಸ್ ದೀಕ್ಷಿತ್,**
೯ನೆಯ ತರಗತಿ 'ಡಿ' ವಿಭಾಗ



**ಶರಣ್ಯ ಎಂ ಸಿ**
10 ನೆಯ ತರಗತಿ 'ಎ' ವಿಭಾಗ

# ಮೌನ

ಮೌನದೊಳಗಿದೆ ನೂರಾರು ಮಾತು
ಅದನ್ನು ಹೇಳಲಾಗದೆ ಮನಸೋತು
ಮೌನಕ್ಕೆ ಬೆಲೆಯಿದೆ, ಮಾತಿಗಿಲ್ಲ
ಇದನರಿತವರು ಬಹಳವಿಲ್ಲ
ವನ್ಯಜೀವಿಗಳೆಲ್ಲವೂ ಮಾತಿಲ್ಲದೆ ಮೌನವಾದರೂ
ಅವುಗಳಲ್ಲಿದೆ ಸಮತೋಲನ
ಮೌನದ ಅರ್ಥವನ್ನು ತಿಳಿದರೆ ಮಾನವ
ಪ್ರಕೃತಿಯ ಪ್ರತಿ ವಿಷಯವನ್ನು ತಿಳಿಯುವ

**ಚಿತ್ರ ಕೃಪೆ: ನವ್ಯ ಬಿ ಆರ್**
9ನೆಯ ತರಗತಿ 'ಇ' ವಿಭಾಗ





**ಆಕಾಂಕ್ಷ ಬಿ,**
10ನೆಯ ತರಗತಿ 'ಇ' ವಿಭಾಗ


# ಮಳೆ

**ಚಿತ್ರ ಕೃಪೆ: ಮೇಘಾ ಪಿ ಜೈನ್,**
10ನೆಯ ತರಗತಿ 'ಬಿ' ವಿಭಾಗ



ಮಳೆ ಬಂದರೆ ಸಂತೋಷವು
ಮಳೆ ಇದ್ದರೆ ಬೆಳೆ
ಮಳೆಯ ಹನಿಯೇ,
ಏನು ನಿನ್ನ ಸೊಬಗಿನ ಮಹಿಮೆ
ಎಣಿಸಲಾಗದು ನಿನ್ನ
ಬಣ್ಣಿಸಲೂ ಆಗದು!

ಝುರಿ, ತೊರೆ, ಹೊಳೆ
ತುಂಬಿ ಹರಿಯಿತು
ಜುಳು ಜುಳು ನಿನಾದ
ಕೇಳಿ ಮನವು ಕುಣಿಯಿತು
ಬಾನಿಂದ ನೀ ಧರೆಗಿಳಿಯೇ
ಈ ಭೂಮಿಯೊಡಲು ತಂಪಾಯಿತು



**ಗಹನ ಹೆಚ್ ಪ್ರಸಾದ್**
9ನೆಯ ತರಗತಿ 'ಇ' ವಿಭಾಗ

# ನಮ್ಮ ಕರುನಾಡು

ಚಿನ್ನದಂತಹ ನಾಡು
ಕೈಬೀಸಿ ಕರೆದಿದೆ ನೋಡು
ಮರೆಯಬೇಡ
ನಮ್ಮ ಕನ್ನಡ ನಾಡು

ಮೈಸೂರ ಅರಮನೆಯ
ದಸರವ ನೋಡು
ರಂಗನತಿಟ್ಟಿನ ಪಕ್ಷಿಗಳ
ಇಂಪಾದ ಹಾಡು

ಹಚ್ಚ ಹಸಿರಾಗಿದೆ
ನಮ್ಮ ಮಲೆನಾಡು
ನೋಡಲು ಬಲು ಚಂದ
ನಮ್ಮ ಕರುನಾಡು

ತಾಯಿ ಕನ್ನಡಾಂಬೆಗೆ
ಜಯವಾಗಲಿ



**ಅಚಿತ ಎನ್**
೬ನೆಯ ತರಗತಿ 'ಇ' ವಿಭಾಗ



**ಚಿತ್ರ ಕೃಪೆ: ಶ್ರೇಯಾ ಭಾರಧ್ವಾಜ್**
೯ನೆಯ ತರಗತಿ 'ಇ' ವಿಭಾಗ

# ನಮ್ಮ ನಾಡು – ನುಡಿ

ಕನ್ನಡವೇ ನಮ್ಮುಸಿರು, ಕನ್ನಡವೇ ಹಸಿರು
ಎಂದು ಕನ್ನಡಿಗರೇ ನುಡಿಯದೆ ಇದ್ದರೆ
ಮತ್ತ್ಯಾರು ಹೇಳುವರಯ್ಯಾ?
ವಿವಿಧತೆಯಲಿ ಏಕತೆಯನ್ನು ಹೊಂದಿದ ನಾಡನ್ನು
ಗೌರವಿಸದಿರೆ ಇದನ್ನು
ಮತ್ತ್ಯಾರು ಗೌರವಿಸುವರಯ್ಯಾ?
ಕಲೆ ಸಂಸ್ಕೃತಿಯ ನಾಡು. ಬೇಲೂರು ಹಳೆಬೀಡು
ಶ್ರೀಮಂತಿಕೆಯ ನಾಡು, ನಮ್ಮೀ ಕರುನಾಡು
ಇದ ಮರೆತರೆ ಹೇಗಯ್ಯಾ? ಮತ್ತ್ಯಾರು ಉಳಿಸುವರಯ್ಯಾ?

**ಸಿಯೋನಾ ಆರ್ ಗೌಡ**
೮ನೆಯ ತರಗತಿ 'ಜಿ' ವಿಭಾಗ



**ಚಿತ್ರ ಕೃಪೆ: ಸಾಯಿಸಿರಿ ಕೆ**
೮ನೆಯ ತರಗತಿ 'ಜಿ' ವಿಭಾಗ

# ಸತ್ಯ ಮಾತು

ಕಾಗೆ ಯಾವುದು
ಕೋಗಿಲೆ ಯಾವುದು
ತಿಳಿಯುವುದೇ ಇಲ್ಲ
ಅವು ಬಾಯಿ ಬಿಟ್ಟಾಗಲೇ
ಬಯಲಾಗುವುದು ಎಲ್ಲಾ!
ಅಲೆದಾಡಿದ ಬೇಡ ಬೇಸರದಿಂದ ಹೇಳಿದ
ಬೇಟೆಯ ಸಹವಾಸವೇ ಬೇಡ



**ಅನ್ವೀಕ್ಷಾ ನಾಯಕ್**
೬ನೆಯ ತರಗತಿ 'ಇ' ವಿಭಾಗ

# ಸೂರ್ಯ

ಬಾರೋ ಸೂರ್ಯ ಬೇಗನೆ ಬಾರೋ
ಚಳಿಯನ್ನು ಕಳೆದು ಬಿಸಿಲನು ತಾರೋ
ಗುಬ್ಬಿ ಹಕ್ಕಿ ಚಿಲಿಪಿಲಿಗುಟ್ಟಿ
ನಿನಗೆ ಸ್ವಾಗತ ಹಾಡುತಿವೆ

ನಿನ್ನಯ ಸ್ಪರ್ಧಿ ಅಪ್ಪನು ಆಗಲೆ
ಹೊಲಕೆ ದನಗಳನು ಹೊಡೆದಿಹನು
ಉತ್ತಿಬಿತ್ತಿ ಪೈರನು ಬೆಳೆದು
ಜಗಕೆ ಅನ್ನವ ನೀಡುವನು

ಸೂರ್ಯನೆ ನೀನು ಬಂದರೆ ಬೇಗ
ಕಟ್ಟಿದ ಕರುವಿಗೂ ಮೊಲೆ ಹಾಲುಂಟು
ಅಮ್ಮನು ಹಾಲನು ಕರೆದು
ನನಗೂ ಹಾಲನು ಕುಡಿಸುವುದುಂಟು



**ಸಾನಿಧ್ಯ ಕೆ**
೬ನೆಯ ತರಗತಿ ‘ಎಫ್’ ವಿಭಾಗ

**ಚಿತ್ರ ಕೃಪೆ: ಅದಿತಿ ದಿನೇಶ್**
೯ನೆಯ ತರಗತಿ ‘ಬಿ’ ವಿಭಾಗ




# ಬದಲಾದ ಕಾಲ

ನೋಡಿ ನಮ್ಮ ಕಾಲವನ್ನು
ಮೋಸದ ಜಾಲವನ್ನು
ನಂಬಲಾಗದು ಯಾರನ್ನು!

ಜಗದ ಪೂರ್ತಿ ಕಲ್ಮಶ ಬಿತ್ತಿ
ಉದ್ಧಾರವಾದವರು ಎಲ್ಲರೂ ಇಲ್ಲಿ
ಸತ್ಯ ಸಹಾಯ ಸಹಕಾರ ಸತ್ತಿಹವು
ಹೂತಿರುವರು ಮಣ್ಣಿನಲ್ಲಿ

ಕಣ್ಮರೆಯಾಯಿತು ನ್ಯಾಯ
ತುಂಬಿಕೊಂಡಿತು ಅನ್ಯಾಯ
ಸುಳ್ಳಿನ ಸರಮಾಲೆಯಲ್ಲಿ
ಸತ್ಯ ಸತ್ತಿತು ಕಾಣಯ್ಯ!

ನೋಡಿ ನಮ್ಮ ಕಾಲವನ್ನು
ಸತ್ತುಹೋದ ನಂಬಿಕೆಯನ್ನು
ಹೂತು ಹೋದ ಸತ್ಯವನ್ನು
ಕಣ್ಮರೆಯಾದ ನ್ಯಾಯವನ್ನು



**ಚಿತ್ರ ಕೃಪೆ: ಅಖಿತಾ ವೈ ಆರ್**
10ನೆಯ ತರಗತಿ ‘ಬಿ’ ವಿಭಾಗ



**ಶ್ರೀರಾಮ್ ಎಂ ಎಚ್**
೮ನೆಯ ತರಗತಿ ‘ಸಿ’ ವಿಭಾಗ

# ಗುರು ವಂದನೆ

ಅಲ್ಲಿ ಇಲ್ಲಿ ಏಕೆ ಹುಡುಕುವೆ ದೇವರನ್ನು
ಗುರುಗಳಿಹರು ಬಂದು ನೋಡು ಶಾಲೆಯನ್ನು

ಅಪ್ಪ ಅಮ್ಮ ಕೊಟ್ಟರು ನನಗೆ ಜನ್ಮವನ್ನು
ಗುರುಗಳಿತ್ತರು ನನಗೆ ಸಂಸ್ಕಾರ ಜ್ಞಾನವನ್ನು

ತಾವೆ ಉರಿದರೂ ಬೆಳಕು ನೀಡುವರು ದೀಪದಂತೆ
ನಮ್ಮ ಬಾಳು ಬೆಳಗುವರು ಕಾಣದಂತೆ

ಹೇಗೆ ಹೇಳಲಿ ಗುರುಗಳೆಲ್ಲರಿಗೂ ನನ್ನ ನಮನ
ಅದಕ್ಕಾಗಿಯೇ ಬರೆದಿರುವೆ ಈ ಪುಟ್ಟ ಕವನ





**ಅನು ಮಹೇಶ್**
7ನೆಯ ತರಗತಿ ‘ಬಿ’ ವಿಭಾಗ

# ನಿಶ್ಶಬ್ದ ಜಗತ್ತು

ನಿಶ್ಶಬ್ದದ ಜಗತ್ತು ನಿಶ್ಚಿಂತೆಯ ಜಗತ್ತು
ಶಬ್ದದ ಅರಿವಿಲ್ಲದೆ ಮಲಗಿದೇ ಜಗತ್ತು
ಪ್ರಕೃತಿಯು ಲಾಲಿ ಹಾಡ ಗುನುಗುತ್ತಿದೆ
ತಂಪಿನ ಸಂಚಾರದಿ ಗಾಳಿಯು ತಣಿಸುತ್ತಿದೆ
ಆಹಾ! ಪಕ್ಷಿಗಳಂಚರ ಜಗಕಿವಿಗೆ ಇಂಪ ನೀಡುತ್ತಿದೆ
ನಿಶ್ಶಬ್ದದ ಜಗತ್ತು ಸುಂದರ ಜಗತ್ತು
ಯಾರೂ ಇಲ್ಲದೆ ನಿಶ್ಶಬ್ದದಿ ಮಲಗಿದೆ ಜಗತ್ತು.

ನಿಶ್ಶಬ್ದ ಜಗತ್ತಿನ ಮಡಿಲೊಂದು ಮಾಯೆ
ಅದರೆಡೆಯ ಶಾಂತಿಯು ಕಾಣದಾ ಛಾಯೆ
ಶಾಂತಿಯೊಂದೇ ಈ ಜಗದ ನಿಶ್ಶಬ್ದ ಕಾಯ
ಮನದಲ್ಲಿ ಓಡಿಸುವುದು ನೂರೆಂಟು ಧ್ಯೇಯ

ಈ ನಿಶ್ಶಬ್ದ ಜಗತ್ತು ಶಾಂತಿಯ ಜಗತ್ತು
ಈ ನಿಶ್ಶಬ್ದ ಜಗತ್ತು ನೆಮ್ಮದಿಯ ಜಗತ್ತು

ನಿಶ್ಶಬ್ದ ಜೀವನ ಜಗತ್ತಿನ ಬೃಂದಾವನ
ಗುಂಪಾಗಿ ಉಲಿಯುವ ಪಕ್ಷಿಗಳ ಕೂಗು,
ಜೊತೆಯಾಗಿ ಬೆಳೆಯುವ ಪ್ರಾಣಿಗಳ ಗುಂಪು
ಗಿಡಮರಬಳ್ಳಿಯ ನಡುವಣ, ಕೇಳುವ ಆ ಸದ್ದು
ಪರಿಸರ ಸೌಂದರ್ಯವ ಸವಿಯುವುದೇ ಮುದ್ದು
ಸವಿಗಾಳಿ ತಂಪನು ಸವಿಯುವ ಜಗವು
ತನ್ನೊಳಗಿನ ಮಾತಲ್ಲಿಯೇ ಕಳೆಯುವುದು ದಿನವು

ನಿಶ್ಶಬ್ದ ಜಗದ ಕತ್ತಲೆಯ ತೊರೆದು
ಮೌನವ ಮುರಿದು ಆನಂದ ತುಂಬಿ
ನಿಶ್ಶಬ್ದ ಮನಕೆ ಶ್ರೇಯಸ್ಸ ತಂದು
ಜೀವನ ಗಮ್ಮತ್ತಿಗೆ ಶಾಂತಿಯ ನೀಡಿ
ನಮ್ಮೊಳ ಮಾತ ಕೇಳುವ ಸಖನಾಗಿ ನಿಲ್ಲುವುದು
ಅನುಭವದ ಜಗತ್ತು ಈ ನಿಶ್ಶಬ್ದ ಜಗತ್ತು

ಈ ನಿಶ್ಶಬ್ದ ಜಗತ್ತು ಶಾಂತಿಯ ಜಗತ್ತು
ಈ ನಿಶ್ಶಬ್ದ ಜಗತ್ತು ನೆಮ್ಮದಿಯ ಜಗತ್ತು

**೯ನೆಯ ತರಗತಿ 'ಎ' ವಿಭಾಗದ ವಿದ್ಯಾರ್ಥಿಗಳು**

**ಚಿತ್ರ ಕೃಪೆ: ಧನ್ವಿ**
೯ನೆಯ ತರಗತಿ 'ಎ' ವಿಭಾಗ



# ಥಂಡಿ ಮಳೆ

**ಚಿತ್ರ ಕೃಪೆ: ನಿವೇದಾ**
5ನೆಯ ತರಗತಿ 'ಬಿ' ವಿಭಾಗ



ಮಳೆ ಮಳೆ ಬಾ ಮಳೆ
ಪರಿಸರವನ್ನು ತಂಪಾಗಿಸು ಮಳೆ
ಕೆರೆ ಬಾವಿಯನ್ನು ತುಂಬಿಸು ಮಳೆ
ಗುಡುಗು ಸಿಡಿಲು ಬರಿಸುವ ಮಳೆ
ಮಳೆ ಮಳೆ ಬಾ ಮಳೆ

ಮಳೆಯಲ್ಲಿ ನವಿಲಿನಂತೆ
ಕುಣಿಯುವ ಆಸೆ
ಮಳೆಯಲ್ಲಿ ಜಾರಿ ಬಿದ್ದು
ಬಟ್ಟೆಯೆಲ್ಲ ಕೊಳೆ
ಸಂತೋಷದಲ್ಲಿ ಆಟವಾಡುವ ಮಳೆ
ಮಳೆ ಮಳೆ ಬಾ ಮಳೆ




**ಕೃಷ್ಣಭವಾನಿ**
4ನೆಯ ತರಗತಿ 'ಎ' ವಿಭಾಗ

# ಮಳೆ ಬಂತು ಮಳೆ

ಮಳೆ ಬಂತು ಮಳೆ
ಗಿಡಗಳಿಗೆ ನೀರು ಸಿಕ್ಕಿತು
ಬಟ್ಟೆ ನೆನೆದು ಹೋಯಿತು
ಜೀವಿಗಳಿಗೆಲ್ಲ ನೀರು ಸಿಕ್ಕಿತು

ನೆಲ ತಂಪಾಯಿತು
ಛತ್ರಿ ಹಿಡಿದು ಮನೆಗೆ ಬಂದೆವು
ನೋಡ ನೋಡುತ ಮಳೆನಿಂತು ಹೋಯಿತು
ಮಳೆ ಬಂತು ಮಳೆ, ಮಳೆ ಹೋಯ್ತು ಮಳೆ



**ದರ್ಶಿತ್**
4ನೆಯ ತರಗತಿ 'ಬಿ' ವಿಭಾಗ

**ಚಿತ್ರ ಕೃಪೆ: ಆರಾಧ್ಯ**
5ನೆಯ ತರಗತಿ 'ಎ' ವಿಭಾಗ




# ಆತ್ಮೀಯ ಗೆಳತಿ ಚೋಟು

**ಚಿತ್ರ ಕೃಪೆ: ಧೃತಿ ಸುರೇಶ್**
8ನೆಯ ತರಗತಿ 'ಇ' ವಿಭಾಗ



ಆತ್ಮೀಯರು ಎಂದರೆ ನಮ್ಮ ಮನಸ್ಸಿಗೆ ಹತ್ತಿರವಾದವರು. ನಾವು ಸುಖದಲ್ಲಿ ಹಿಗ್ಗದೆ, ದುಃಖದಲ್ಲಿ ಕುಗ್ಗದೆ ಸಮಚಿತ್ತರಾಗಿರಲು ಆತ್ಮೀಯರೇ ಕಾರಣ. ನನಗೆ ಆತ್ಮೀಯ ಗೆಳೆಯರು ಅಂತ ಯಾರು ಇಲ್ಲ. ಹಾಗಂತ ನನಗೆ ಗೆಳೆಯರೇ ಇಲ್ಲ ಅಂತ ಅಲ್ಲ. ನನಗೂ ಕೂಡ ಗೆಳೆಯರು ಇದ್ದಾರೆ. ಆದರೆ ಯಾರು ಆತ್ಮೀಯ ಸ್ಥಾನದಲ್ಲಿ ಇಲ್ಲ. ಆದರೆ ಒಬ್ಬಳು ಮಾತ್ರ ನನಗೆ ತುಂಬಾ ಆತ್ಮೀಯಳು; ಅವಳೇ ನನ್ನ ಮುದ್ದಿನ ಬೆಕ್ಕು ಚೋಟು. ಮೇ 9 2018 ರಲ್ಲಿ ಚೋಟು ನಮಗೆ ಸಿಕ್ಕಿದಳು. ಆಗ ಅವಳು ಎರಡು ವಾರದ ಪುಟ್ಟಮರಿ ಆಗಿದ್ದಳು. ಅವಳ ಎರಡು ಪುಟ್ಟ ಪಿಳಿ ಪಿಳಿ ಕಣ್ಣುಗಳು ನನಗೆ ಬಹಳ ಇಷ್ಟವಾದವು. ಅವಳ ಮುಗ್ಧತೆ ನನ್ನನ್ನು ಅವಳ ಕಡೆಗೆ ಸೆಳೆಯಿತು. ಸ್ವಲ್ಪ ದಿನಗಳ ನಂತರ ತಿಳಿದದ್ದು ಆಕೆ ನಮ್ಮ ಪಕ್ಕದ ಮನೆಯ ಬೆಕ್ಕು ಎಂದು. ಅವರು ಈ ವಿಷಯದ ಬಗ್ಗೆ ಏನೂ ಹೇಳಲಿಲ್ಲ. ನನಗೂ ಕೂಡ ಅವಳನ್ನು ಕಳಿಸಿಕೊಡುವುದು ಇಷ್ಟವಿರಲಿಲ್ಲ. ನಿಧಾನವಾಗಿ ಚೋಟು ನಮ್ಮ ಮನೆಗೆ ಹೊಂದಿಕೊಂಡು ಬಿಟ್ಟಳು. ಮೊದಮೊದಲು ಸಿಕ್ಕಾಪಟ್ಟೆ ತರಲೆ ಆಗಿದ್ದಳು. ನಿಧಾನವಾಗಿ ಅವಳು ತನ್ನ ತರಲೆ ಕೆಲಸಗಳನ್ನು ಕಡಿಮೆ ಮಾಡಿದಳು. ಈಗ ಅವಳು ನಮ್ಮ ಮನೆಯಲ್ಲಿ ಒಂದು ಪುಟ್ಟ ಮಗುವಿನ ತರಹ ನಮ್ಮಲ್ಲಿ ಒಬ್ಬ ಸದಸ್ಯಳಾಗಿದ್ದಾಳೆ. ನಾನು ಶಾಲೆಯಿಂದ ಮನೆಗೆ ಮರಳಿದಾಗ ಮೊದಲು ಅಮ್ಮನನ್ನು ಮಾತನಾಡಿಸಿದರೆ ಅವಳಿಗೆ ತುಂಬಾ ಕೋಪ ಮುಖ ತಿರುಗಿಸಿಕೊಂಡು ಕುಳಿತುಕೊಳ್ಳುತ್ತಾಳೆ. ನಾನು ಎಷ್ಟೇ ಕೂಗಿದರು ತಿರುಗಿ ಸಹ ನೋಡುವುದಿಲ್ಲ. ಹಾಗಾಗಿ ದಿನವೂ ನಾನು ಮೊದಲು ಶಾಲೆಯಿಂದ ಮನೆಗೆ ಬಂದ ತಕ್ಷಣ ಅವಳನ್ನೇ ಮುದ್ದಾಡುತ್ತೇನೆ. ನಾವೆಲ್ಲರೂ ಅವಳಿಗೆ ಸಾಕಷ್ಟು ಪ್ರೀತಿಯನ್ನು ಕೊಡುತ್ತಾ ನೋಡಿಕೊಳ್ಳುತ್ತಿದ್ದೇವೆ. ಹೀಗೆ ಚೋಟು ನನಗೆ ತುಂಬಾ ಆತ್ಮೀಯಳಾಗಿದ್ದಾಳೆ. ಅವಳಿಗೆ ಎಷ್ಟೇ ಬೇಸರವಾದರೂ ನನ್ನ ಹತ್ತಿರ ಓಡೋಡಿ ಬರುತ್ತಾಳೆ. ನಾವಿಬ್ಬರು ಒಳ್ಳೆಯ ಸ್ನೇಹಿತರಾಗಿದ್ದೇವೆ. ಮನುಷ್ಯರಿಗಿಂತ ನಮ್ಮ ಭಾವನೆಗಳು ಪ್ರಾಣಿಗಳಿಗೆ ಅರ್ಥವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ನಾನು ಮನುಷ್ಯರ ಜೊತೆಗೆ ಸ್ನೇಹಮಯವಾಗಿರಲು ಹೆಚ್ಚಾಗಿ ಇಷ್ಟಪಡುವುದಿಲ್ಲ. ಬದಲಿಗೆ ನಾನೊಬ್ಬಳು ಪ್ರಾಣಿ ಪ್ರಿಯೆ. ನನ್ನ ಖುಷಿಯನ್ನಾಗಲಿ ಅಥವಾ ದುಃಖವನ್ನಾಗಲಿ ನಾನು ನನ್ನ ಕುಟುಂಬದವರೊಡನೆಯೇ ಹಂಚಿಕೊಳ್ಳುತ್ತೇನೆ. ಹಾಗಾಗಿ ನನ್ನ ವೈಯಕ್ತಿಕ ವಿಚಾರಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುವ ಸಂದರ್ಭ ಇಲ್ಲಿಯವರೆಗೂ ಬಂದಿಲ್ಲ. ಆ ಕಾರಣದಿಂದ ನಾನು ಯಾವ ಸ್ನೇಹಿತರನ್ನು ಆತ್ಮೀಯರೆಂದು ಭಾವಿಸಿಲ್ಲ. ನನಗೆ ನನ್ನ ಕುಟುಂಬವೇ ಮೊದಲು ಅನಂತರ ಎಲ್ಲ.



**ಮಾಧುರಿ ಆರ್**
8ನೆಯ ತರಗತಿ 'ಸಿ' ವಿಭಾಗ

# ವಿಶೇಷವಾದ ಬಾಗಿಲು

ರಾಮಾಪುರ ಎಂಬ ಊರು ಇತ್ತು. ಆ ಊರಿನಲ್ಲಿ ತುಂಬಾ ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಎಲ್ಲಾ ಮಕ್ಕಳು ಶಾಲೆ ಬಿಟ್ಟ ತಕ್ಷಣ ಎಲ್ಲರು ಮನೆಯತ್ತ ಓಡುತ್ತಿದ್ದರು. ಒಂದು ದಿನ ಶಾಲೆ ಬಿಟ್ಟಿತು, ಮಕ್ಕಳೆಲ್ಲ ಮನೆಯತ್ತ ಓಡಿದರು. ಇನ್ನು ಕೆಲವರು ಬೇರೆ ದಾರಿಯಿಂದ ಮನೆಗೆ ಹೋಗಲು ಓಡಿದರು. ಆ ಕೆಲವರು ಯಾರೆಂದರೆ ರಾಮು, ಶಾಮು, ಸೂರ್ಯ ಮತ್ತು ರಾಜು. ರಾಮು ಸ್ಪರ್ಧೆಗಳಲ್ಲಿ ಮುಂದೆ ಇದ್ದನು. ರಾಮು ತುಂಬ ಬುದ್ಧಿವಂತ, ಸೂರ್ಯ ಓಟದಲ್ಲಿ ಮುಂದೆ ಇದ್ದ ಮತ್ತು ರಾಜು ಓದು ಬರೆಹದಲ್ಲಿ ಮುಂದೆ ಇದ್ದ. ಆ ಊರಿನಲ್ಲಿ ಒಂದು ವಿಶೇಷವಾದ ಬಾಗಿಲಿತ್ತು. ಆ ನಾಲ್ವರು ಆ ಬಾಗಿಲ ಒಳಗೆ ಹೋಗಬೇಕು ಎಂದುಕೊಂಡಿದ್ದರು. ಒಂದು ದಿನ ಆ ನಾಲ್ಕು ಜನ ಬಾಗಿಲ ಹತ್ತಿರ ಹೋದರು. ಎಲ್ಲರು ಬಾಗಿಲ ಒಳಗೆ ಹೋದರು. ಆಗ ಒಂದು ಧ್ವನಿ ಹೇಳಿತು, “ನೀವು ನಾನು ಕೊಡುವ ಷರತ್ತಲ್ಲಿ ಗೆದ್ದರೆ ನಿಮಗೆ ಬೇಕಾದ್ದನ್ನೆಲ್ಲಾ ಕೊನೆಯಲ್ಲಿ ಕೇಳಿ” ಎಂದು ಧ್ವನಿ ಹೇಳಿತು. ಎಲ್ಲಾರು ಷರತ್ತಿಗೆ ಒಪ್ಪಿದರು. ಆದರೆ ಆ ಸ್ಪರ್ಧೆಯ ನಿಬಂಧನೆ ಏನೆಂದರೆ ಒಂದು ಷರತ್ತಲ್ಲಿ ಒಬ್ಬರು ಮಾತ್ರ ಭಾಗವಹಿಸಬೇಕು. ಮೊದಲನೆಯ ಷರತ್ತು 10 ನಿಮಿಷದಲ್ಲಿ 50 ಮೀಟರನ್ನು ಕಪ್ಪೆಯ ರೀತಿ ಜಿಗಿಯಬೇಕು. ರಾಮು ಮೊದಲನೆಯ ಷರತ್ತಲ್ಲಿ ಭಾಗವಹಿಸಿ ಗೆದ್ದ. ಎರಡನೆಯ ಷರತ್ತು ಅವರಿಗೆ ಇಷ್ಟವಾದ ಕಥೆಯನ್ನು ಬರೆಯಬೇಕು. ಈ ಷರತ್ತನ್ನು ರಾಜು ಗೆದ್ದನು. ಅವರೆಲ್ಲರು ಅವರಿಗೆ ಬೇಕಾಗಿದ್ದನ್ನೆಲ್ಲ ಕೇಳಿದರು. ಶಾಮು ಮಿಠಾಯಿಗಳನ್ನು ಕೇಳಿದನು. ಸೂರ್ಯ ನಾಲ್ಕು ಸ್ಕೂಲ್ ಬ್ಯಾಗುಗಳನ್ನು ಕೇಳಿದನು. ರಾಜು ಡಾ.ಬಿ.ಆರ್ ಅಂಬೇಡ್ಕರ್ ಅವರ ನಾಲ್ಕುಪುಸ್ತಕಗಳನ್ನು ಕೇಳಿದನು. ಎಲ್ಲರು ನಾಲ್ಕು ಬೂಟುಗಳನ್ನು, ಮಿಠಾಯಿಗಳನ್ನು, ನಾಲ್ಕು ಸ್ಕೂಲ್‌ಬ್ಯಾಗುಗಳನ್ನು ಮತ್ತು ನಾಲ್ಕು ಪುಸ್ತಕಗಳನ್ನು ಹಂಚಿಕೊಂಡರು.



**ಸನ್ನಿಧಿ**
4ನೆಯ ತರಗತಿ ‘ಬಿ’ ವಿಭಾಗ

**ಚಿತ್ರ ಕೃಪೆ: ಜಾಹ್ನವಿ**
5ನೆಯ ತರಗತಿ ‘ಸಿ’ ವಿಭಾಗ




**ಚಿತ್ರ ಕೃಪೆ: ಅತ್ರೇಯಿ ಪೈ**
8ನೆಯ ತರಗತಿ ‘ಇ’ ವಿಭಾಗ



# ಪ್ರೀತಿಯ ಆರೈಕೆ

ಒಂದು ಊರಿನಲ್ಲಿ ಓರ್ವ ಯುವತಿಯಿದ್ದಳು. ಆ ಯುವತಿಯು ತನ್ನ ಮನೆಯ ಅಂಗಳದಲ್ಲಿ ಹಲವಾರು ರೀತಿಯ ಗಿಡಗಳನ್ನು ಬೆಳೆಸಿದ್ದಳು. ಅಲ್ಲಿಗೆ ಬಣ್ಣಬಣ್ಣದ ಚಿಟ್ಟೆಗಳು ಬಂದು ಹೂವಿನ ಮಕರಂದವನ್ನು ಹೀರಿಕೊಂಡು ಹೋಗುತ್ತಿದ್ದವು. ಒಂದು ದಿನ ಒಂದು ಸೊಗಸಾದ ಚಿಟ್ಟೆಯು ಅವಳ ಮನೆಯೊಳಗೆ ಹೊಕ್ಕಿತು. ಯುವತಿ ಅದನ್ನು ನೋಡಿದಾಗ ಅದಕ್ಕೆ ಗಾಯವಾಗಿತ್ತು. ಅವಳು ಅದಕ್ಕೆ ಸಾಂತ್ವನ ನೀಡಿ ಗಾಯಕ್ಕೆ ಔಷಧಿ ಹಚ್ಚಿದಳು. ದಿನಗಳು ಕಳೆದವು ಗಾಯವು ಮಾಗಿತು. ಒಂದು ದಿನ ಚಿಟ್ಟೆಯು ಅಲ್ಲಿಂದ ಪಲಾಯನ ಪಠಿಸಿತು. ಇದರಿಂದ ಯುವತಿಗೆ ದುಃಖವಾಯಿತು. ಆದರೆ ಗಾಯ ಮಾಗಿತ್ತಲ್ಲ ಎಂದು ಖುಷಿಪಟ್ಟಳು.



**ಖುಷಿ ಎಸ್**
7ನೆಯ ತರಗತಿ ‘ಎಫ್’ ವಿಭಾಗ




**ಹಣತೆಯಲ್ಲಿರುವುದು ಬೆಳಕು**
**ಮನಸ್ಸಿನಲ್ಲಿರುವುದು ಹೊಳಪು**
**ಹಣತೆಯಿಂದ ಅಂಧಕಾರ ತೊಲಗಿಸಿ**
**ಮನದಲ್ಲಿ ಪ್ರೀತಿಯ ಬೆಳಸಿ**
**ಮನುಷ್ಯ ಮಾನವೀಯತೆಯೆಡೆಗೆ**
**ಬದುಕು ಸಾಧನೆಯೆಡೆಗೆ**

**– ನಾಗೇಶ ಬಿ**


# ಗುರಿ ಮತ್ತು ಗುರುವಿನ ಮಹತ್ತ್ವ

ಚಿತ್ರ ಕೃಪೆ: ಶ್ರೇಷ್ಠಾ ರಾಜೀವ
೮ನೆಯ ತರಗತಿ 'ಎ' ವಿಭಾಗ




ಜೀವನದಲ್ಲಿ ನಾವು ದೊಡ್ಡವರಾದ ಮೇಲೆ ಏನೆಲ್ಲ ಆಗಬೇಕೆಂಬ ಆಸೆ ಪಡುತ್ತೇವೆ, ಕನಸು ಕಾಣುತ್ತೇವೆ. ಆದರೆ, ಕನಸಿನ ರೆಕ್ಕೆ ಬಿಚ್ಚಿ ಹಾರಲು ಕಲಿಸುವವರು ಗುರು. ನಮ್ಮ ಕನಸನ್ನು ನನಸು ಮಾಡುವ ಶಕ್ತಿ ಕೇವಲ ಇಬ್ಬರಿಗೆ ಮಾತ್ರ ಇದೆ ಎಂಬುದು ನನ್ನ ಅನಿಸಿಕೆ. ಅದು ಕನಸು ಕಾಣುವ ನಮಗೆ ಹಾಗೂ ಅದನ್ನು ನನಸನ್ನಾಗಿಸಲು ಸನ್ಮಾರ್ಗವನ್ನು ತೋರುವ ನಮ್ಮ ಗುರುಗಳಿಗೆ. ನಮ್ಮ ಆಲೋಚನೆ, ಆಸೆ, ಕನಸುಗಳಿಗೆ ಆಕಾರ ನೀಡಿ ನಮ್ಮ ಮುಂದಿಡುತ್ತಾರೆ. ನಮ್ಮ ಆಸೆಗಳು ಆಸೆಯಾಗಿಯೇ ಇರಬಾರದು ಎಂದು ಬೀಗವನ್ನು ತೆರೆಯುತ್ತಾರೆ. ನಾವು ನಮ್ಮ ಗುರಿಯನ್ನು ಮುಟ್ಟಲು; ತಾವೇ ಬಾಣವಾಗಿ ನಮ್ಮನ್ನು ಗುರಿಯ ಕಡೆಗೆ ಮೊಗ ಮಾಡಲು ತಿಳಿಸುತ್ತಾ, ಅರಿವನ್ನು ಮೂಡಿಸುತ್ತಾರೆ. ನಾವು ನಮ್ಮ ಗುರಿಯನ್ನು ತಲುಪಿದರೆ ನಮಗಿಂತಲೂ ಹೆಚ್ಚು ಖುಷಿ ಪಡುವವರು ನಮ್ಮ ಗುರುಗಳು.

'ಗುರು ಇಲ್ಲದೆ ಗುರಿ ಇಲ್ಲ' ಎಂಬುದು ಸತ್ಯ. ಗುರಿಯನ್ನು ನೋಡಿದ ಕ್ಷಣ ನಾವು ಅದನ್ನು ಹಿಡಿದುಕೊಳ್ಳಬೇಕು, ಬೀಳುವ ಭಯವಿರಬಾರದು. ಏಕೆಂದರೆ ನಮ್ಮ ಪಕ್ಕದಲ್ಲಿ ಗುರುವಿದ್ದಾರೆ.



ಸಾಯಿಸಿರಿ. ಕೆ
೮ನೆಯ ತರಗತಿ 'ಜ' ವಿಭಾಗ


ಚಿತ್ರ ಕೃಪೆ: ವಿಭಾ ವಿ ಕೆ
೮ನೆಯ ತರಗತಿ 'ಎ' ವಿಭಾಗ




# ಪ್ರಾಮಾಣಿಕತೆ

ನಾನು ನನ್ನ ತಂದೆ ತಾಯಿಯ ಜೊತೆಗೆ ಒಮ್ಮೆ ಊಟಕ್ಕಾಗಿ ಹೋಟೆಲ್‌ಗೆ ಹೋಗಿದ್ದೆ. ಆ ಸಂದರ್ಭದಲ್ಲಿ ನಾವು ಬಗೆಬಗೆಯ ರುಚಿರುಚಿಯಾದ ತಿನಿಸುಗಳನ್ನು ತರಲು ಹೋಟೆಲ್‌ನ ಮಾಣಿಗೆ ತಿಳಿಸಿದ್ದೆವು. ಬಾಯಲ್ಲಿ ನೀರೂರಿಸುವಂತಿದ್ದ ಆ ತಿನಿಸುಗಳನ್ನೆಲ್ಲ ನಾವೆಲ್ಲ ಖುಷಿ ಖುಷಿಯಾಗಿಯೇ ಮನದಣಿಯೆ ತಿಂದೆವು. ಹೊರಡುವ ಸಮಯವಾಯಿತು. ಮಾಣಿಗೆ "ಬಿಲ್ಲನ್ನು ಕೊಡಿ" ಎಂದು ಕೇಳಿದಾಗ ಆ ಹೋಟೆಲ್ಲಿನ ಮಾಣಿ ಬಿಲ್ಲನ್ನೇನೋ ಕೊಟ್ಟರು. ಆದರೆ ಆ ಬಿಲ್ಲನ್ನು ನೋಡಿದರೆ ಅದರಲ್ಲಿ ಒಂದು ತಿನಿಸನ್ನು ಮತ್ತು ಅದರ ಬೆಲೆಯನ್ನು ಹಾಕಿರಲಿಲ್ಲ. ಅದನ್ನು ಗಮನಿಸಿದ ನಾನು ನನ್ನ ತಂದೆ ತಾಯಿಯ ಗಮನಕ್ಕೆ ತಂದೆನು. ಕೂಡಲೆ ನನ್ನ ಪೋಷಕರು ಈ ವಿಷಯವನ್ನು ಮಾಣಿಯವರಿಗೆ ಹೇಳಿದರು. ಆಗ ಮಾಣಿಯು ಧನ್ಯತಾಭಾವದಿಂದ ನಮ್ಮ ಕಡೆ ನೋಡಿ, "ಎಲ್ಲರೂ ನಿಮ್ಮಂತೆಯೇ ಪ್ರಾಮಾಣಿಕತೆಯಿಂದ ಇದ್ದರೆ ಎಷ್ಟು ಚೆನ್ನಾಗಿರುತ್ತದೆ" ಎಂದು ಹೇಳಿದರು. ಇನ್ನು ಮುಂದೆ ಎಚ್ಚರಿಕೆವಹಿಸುವುದಾಗಿಯೂ ತಿಳಿಸಿದರು. ಈ ಘಟನೆಯಿಂದ ಹೋಟೆಲಿನ ಮಾಣಿಗೆ ಅವರ ಮಾಲೀಕರಿಂದ ಆಗುವ ತೊಂದರೆಯನ್ನು ತಪ್ಪಿಸಿದಂತಾಯಿತು.

ಯಾವುದೇ ಘಟನೆಯಾದರೂ ನಾವು ನಮ್ಮ ಜೀವನದಲ್ಲಿ ಪ್ರಾಮಾಣಿಕತೆಯನ್ನು ಎಂದಿಗೂ ತ್ಯಜಿಸಬಾರದು. ಸದಾ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕು.



ರಿತುಪರ್ಣ ಪಿ
೯ನೆಯ ತರಗತಿ 'ಇ' ವಿಭಾಗ

ಕನವರಿಕೆಯ ತನುಮನಗಳ ಒಳಗಣ
ಕನ್ನಡತನ ಪಸರಿಪ ಕವಿ ನೀನ್
ಬಾನ್ ಬಣ್ಣವದು ಮನಮುದದಿ ಹರಿವ
ಒಳಗೊಳಗೆ ಕಿವಿನಿಮಿರಿಸುವ ಪದಗೊಳ್

ಚಿತ್ತದೊಳುಕ್ತಿ ಪುಟ್ಟಿದಾಗಿನಿಂದದಕೆ
ನಿಮಿತ್ತವಿರಚಿತ ಕಾವ್ಯರೂಪಣಿಕೆ
ಕವಿತ್ವದೊಳುದಕವೆರೆದ ಕವಿ ನೀನ್
ಕನ್ನಡತನವನು ಮನದೊಳ್ ಹುದುಗಿಸಿದಾತ


ಬೆಂದದರಿಂದಲೇ ನೀ ಬೇಂದ್ರೆಯಾದೆಯಂತೆ
ದತ್ತಾತ್ರೇಯನೇ ನಿನ್ನನು ಮನದಿ ನೆನೆದೆ ನಾನು
ಪಡೆಯಲೆಂತು ಆಶೀರ್ವಾದವನು
ಪರಿಪರಿ ಬೇಡುವೆ ಹರಸಿ ಹಾರೈಸು ಎನ್ನ ಕವಿದೈವವೆ!

– ಮಹೇಶ ಹುಯಿಲಾಳು



# ದೊಡ್ಡವರು ಯಾರು?

ದೊಡ್ಡವರು ಯಾರು? ಎಂದರೆ ನನ್ನ ಪ್ರಕಾರ, ಯಾರಿಗೆ ದುಡ್ಡಿನ ಮೇಲೆ ಮೋಹವಿಲ್ಲವೋ; ಮಾನವೀಯತೆಯನ್ನು ಯಾರು ಹೊಂದಿರುವವರೋ ಅವರು. ಸಾಮಾನ್ಯವಾಗಿ ನಾವು ಕೆಲವರನ್ನು ಪ್ರಶ್ನಿಸಿದಾಗ ಈ ಕಾಲದಲ್ಲಿ ದೊಡ್ಡವರು ಎಂದರೆ ದುಡ್ಡು ಇರುವವರು ಎಂದು ಹೇಳುವ ಉತ್ತರ ಬಹಳವಾಗಿ ಸಿಗುತ್ತದೆ. ದೊಡ್ಡವರು ಎಂದಿಗೂ ನೊಂದಿರುವ ಮನುಷ್ಯನ ದುಃಖ ಕೇಳದೆ ಇರುವುದಿಲ್ಲ. ಅವರ ಬಾಳಿನಲ್ಲಿ ಸಂಯಮ, ಪಕ್ವತೆ, ಶಾಂತಿ ಸದಾ ಇರುವುದು. ಉಪದೇಶ, ಸಲಹೆ ಕೇಳುವ ತಾಳ್ಮೆಯೂ ಇರುತ್ತದೆ. ಅವಶ್ಯಕತೆ ಹಾಗೂ ಅನವಶ್ಯಕವಾದ ವಿಚಾರಗಳ ಬಗ್ಗೆ ತಿಳಿದಿರುತ್ತಾರೆ. ಅಂತಹವರ ಜೊತೆ ಸಮಯ ಕಳೆಯುವುದೇ ಒಂದು ಅದೃಷ್ಟ. ಅವರಿಗೆ ಗುರು ವಚನ ಕಿವಿಗೆ ಒಂದು ಆಭರಣವಿದ್ದಂತೆ. ಅವರ ಬಾಯಿಂದ ಬರುವ ಮಾತುಗಳು ಹಿತವಚನ ಎಂದೆನಿಸುತ್ತದೆ. ಇಂತಹ ವ್ಯಕ್ತಿಗಳನ್ನೂ ಸಹ ನಾವು ದೊಡ್ಡವರು ಎಂದು ಹೇಳಬಹುದು.



**ಇಬ್ಬನಿ ಜೆ ಗೌಡ**
10ನೆಯ ತರಗತಿ 'ಸಿ' ವಿಭಾಗ

**ಚಿತ್ರ ಕೃಪೆ: ಛವಿ ಆರ್ ಅಂಗಡಿ**
8ನೆಯ ತರಗತಿ 'ಜಿ' ವಿಭಾಗ




**ಚಿತ್ರ ಕೃಪೆ: ಸಿ ಎನ್ ಪ್ರಣವ್**
8ನೆಯ ತರಗತಿ 'ಎ' ವಿಭಾಗ



# ತಾಳ್ಮೆಯೇ ಬದುಕು

ಮನುಷ್ಯ ನೆಮ್ಮದಿಯ ಬದುಕನ್ನು ಬಾಳಬೇಕೆಂದರೆ, ಎಷ್ಟೇ ಕಷ್ಟದಲ್ಲಿದ್ದರೂ ಎಷ್ಟೇ ನೋವಿನಲ್ಲಿದ್ದರೂ ತನ್ನ ತಾಳ್ಮೆಯನ್ನು ಮಾತ್ರ ಕಳೆದುಕೊಳ್ಳಬಾರದು. ತಾಳ್ಮೆ, ಸಹನೆಯಿಂದ ಬಾಳಿದಾಗ ನಮಗೆ ಹೆಚ್ಚು ಮರ್ಯಾದೆ, ಗೌರವ ಹಾಗೂ ಗೆಲುವು ಸಿಗುತ್ತದೆ. ಕೋಪದ ಕೈಗೆ ಎಂದಿಗೂ ಬುದ್ಧಿಯನ್ನು ಕೊಡಬಾರದು. ಕೊಟ್ಟರೆ ಎಂದಿಗೂ ಜಯ ಸಿಗುವುದಿಲ್ಲ. ಶಬರಿ ವರ್ಷಾನುಗಟ್ಟಲೆ ರಾಮನ ದರ್ಶನಕ್ಕಾಗಿ ಕಾದಿದ್ದಕ್ಕಾಗಿ ಕೊನೆಗೂ ಆತನ ದರ್ಶನ ದೊರಕಿತು. ಹಾಗೆ ವಿದ್ಯಾರ್ಥಿಗಳಾದ ನಾವು ಕೆಲವೊಂದು ವಿಷಯಗಳು ಅರ್ಥವಾಗದಿದ್ದಾಗ ತಾಳ್ಮೆಗೆಡದೆ, ನಿಧಾನವಾಗಿ ಓದಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದಾಗ ಒಳ್ಳೆಯ ಫಲ ಮತ್ತು ಫಲಿತಾಂಶ ಸಿಗುವುದು.

ಕೋಪ, ದುಡುಕುತನ, ಆತುರ ಇವೆಲ್ಲವೂ ಅನರ್ಥಕ್ಕೆ ಈಡು ಮಾಡುತ್ತವೆ. ಜೀವನದಲ್ಲಿ ಕಷ್ಟ ಕಾರ್ಪಣ್ಯ, ಸುಖ ದುಃಖ ಸಹಜವಾಗಿ ಬರುತ್ತವೆ. ಇಂತಹ ಸಂದರ್ಭದಲ್ಲಿ ಮನುಷ್ಯ ತಾಳ್ಮೆಗೆಡದೆ ತನ್ನ ವಿವೇಕವನ್ನು ಕಳೆದುಕೊಳ್ಳಬಾರದು. ಹೇಗೆ ಮಹಾಭಾರತದಲ್ಲಿ ಅರ್ಜುನನು ಕೃಷ್ಣನ ಮಾತನ್ನು ತಾಳ್ಮೆಯಿಂದ ಕೇಳಿದ್ದರಿಂದ ಪಾಂಡವರು ಗೆದ್ದರೋ, ಹಾಗೆಯೇ ಜೀವನದಲ್ಲಿ ಪ್ರತಿಯೊಬ್ಬರ ವಿಚಾರಗಳನ್ನು ಆಲಿಸಿ, ಅರ್ಥ ಮಾಡಿಕೊಂಡು, ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಅಂತಹ ನಿರ್ಧಾರ ಎಂದಿಗೂ ಸರಿ ಇರುತ್ತದೆ.



**ಪಂಚಮಿ ಎ**
10ನೆಯ ತರಗತಿ 'ಡಿ' ವಿಭಾಗ



ಕನ್ನಡ ಮಧುರತೆ ತುಂಬಿದ ನಾಡಲಿ
ಚತುರರ ಕರಸಿರಿ ಮೆರೆಯುತು ನುಡಿಯಲಿ
ಜಯಹೇ ಕರುನಾಡೇ ಜಯಹೇ ನುಡಿಬೀಡೇ

– ಪ್ರಶಾಂತ್ ಎನ್

# ನನ್ನ ನೆಚ್ಚಿನ ಪಾತ್ರ ಲಕ್ಷ್ಮಣ

ಚಿತ್ರ ಕೃಪೆ: ಅನ್ವಿತಾ
೮ನೆಯ ತರಗತಿ 'ಡಿ' ವಿಭಾಗ



ನಮ್ಮ ದೇಶದ ಪವಿತ್ರ ಗ್ರಂಥಗಳಲ್ಲಿ ಒಂದೆಂದರೆ ರಾಮಾಯಣ. ಅದರಲ್ಲಿ ನಮಗೆ ತಕ್ಷಣ ನೆನಪಾಗುವ ಪಾತ್ರಗಳೆಂದರೆ ರಾಮ, ಲಕ್ಷ್ಮಣ, ಸೀತೆ, ಹನುಮಂತ. ನನ್ನ ನೆಚ್ಚಿನ ಪಾತ್ರವೆಂದರೆ ಲಕ್ಷ್ಮಣನ ಪಾತ್ರ. ರಾಮಾಯಣದಲ್ಲಿ ಹೇಗೆ ರಾಮನ ಪಾತ್ರ ಪ್ರಮುಖವಾದದ್ದೋ ಹಾಗೆಯೇ ಲಕ್ಷ್ಮಣನ ಪಾತ್ರವೂ ಬಹು ಮುಖ್ಯವಾಗಿದೆ. ಲಕ್ಷ್ಮಣನ ಸೋದರ ವಾತ್ಸಲ್ಯ, ತ್ಯಾಗ ಮನೋಭಾವ ಎಲ್ಲರೂ ಮೆಚ್ಚುವಂತಹ ಗುಣಗಳು. ತನ್ನ ಅಣ್ಣನಾದ ರಾಮನು ವನವಾಸಕ್ಕಾಗಿ ಕಾಡಿಗೆ ಹೋದಾಗ ಲಕ್ಷ್ಮಣನು ಕೂಡ ತನ್ನ ಸಂಸಾರ, ರಾಜವೈಭೋಗ ಎಲ್ಲವನ್ನು ತ್ಯಾಗ ಮಾಡಿ ತನ್ನ ಅಣ್ಣನ ಜೊತೆ ವನವಾಸಕ್ಕಾಗಿ ಹೊರಟನು. ಲಕ್ಷ್ಮಣನು ತನ್ನ ಅತ್ತಿಗೆಯನ್ನು ರಾವಣನು ಅಪಹರಿಸಿದಾಗ, ತನ್ನ ಅಣ್ಣ ರಾಮನ ಬೆಂಬಲಕ್ಕೆ ನಿಂತ ರೀತಿ ಹಾಗೂ ತನ್ನ ಅತ್ತಿಗೆಯನ್ನು ರಕ್ಷಿಸಲು ಪಟ್ಟ ಕಷ್ಟವನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳುವಂಥದ್ದು ಅಗತ್ಯ. ಇದರಿಂದ ನಾವೆಲ್ಲರೂ ಒಬ್ಬರಿಗೊಬ್ಬರು ಜೊತೆಯಾಗಿದ್ದರೆ ಎಂತಹ ದೊಡ್ಡ ಸಮಸ್ಯೆಯನ್ನಾದರೂ ಸರಿಯೇ ಎದುರಿಸಬಹುದು ಎಂಬ ಧೈರ್ಯವಿರುತ್ತದೆ. ಆತನು ಅಯೋಧ್ಯ ಹಾಗೂ ತನ್ನ ಅಣ್ಣನಿಗೋಸ್ಕರ ಪ್ರಾಣತ್ಯಾಗ ಮಾಡಿದ ರೀತಿ ಆತನ ತ್ಯಾಗಮಯಿ ವ್ಯಕ್ತಿತ್ವವನ್ನು ತೋರಿಸುತ್ತದೆ.



ರಿತುಪರ್ಣ ಆರ್
೯ನೆಯ ತರಗತಿ 'ಇ' ವಿಭಾಗ

ಚಿತ್ರ ಕೃಪೆ: ವಿಹಾನ್ ಎಂ
5ನೆಯ ತರಗತಿ 'ಜಿ' ವಿಭಾಗ



# ನನ್ನ ಬಾಲ್ಯ

ನಾನು ಮಗುವಾಗಿದ್ದಾಗ ಬಹಳ ಮುದ್ದಾಗಿದ್ದೆ. ಅಜ್ಜಿ ಮತ್ತು ಅಮ್ಮ ನನಗೆ ಅಪಾರ ಪ್ರೀತಿ ನೀಡುತ್ತಿದ್ದರು. ನಾನು ಬಹಳ ತುಂಟಿ ಆಗಿದ್ದೆನಂತೆ. ಒಮ್ಮೆ ನಾನು ಹೂ ಕುಂಡದ ಒದ್ದೆಯಾದ ಮಣ್ಣನ್ನು ತೆಗೆದು ಮೈ, ಮುಖಕ್ಕೆ ಹಚ್ಚಿಕೊಂಡಿದ್ದೆನಂತೆ. ಯಾವಾಗಲು ನಗು ನಗುತ್ತ ಇದ್ದೆನೆಂದು ಎಲ್ಲರು ಹೇಳುತ್ತಾರೆ. ನಾನು ಬೇಗ ಮಾತು ಕಲಿತೆನಂತೆ. ನಾನು ಬೇಗ ಬೇಗ ಹೆಜ್ಜೆ ಹಾಕುತ ನಡೆದೆನೆಂದು ಅಮ್ಮ ಹೇಳುತ್ತಾರೆ. ಇದು ನನ್ನ ಬಾಲ್ಯದ ಸಿಹಿ ನೆನಪುಗಳು.



ಸುರಭಿ ಕೆ ಎಸ್
3 ನೆಯ ತರಗತಿ 'ಜಿ' ವಿಭಾಗ



ಕನ್ನಡಮ್ಮನ ಮಕ್ಕಳು ನಾವು
ಕನ್ನಡವನ್ನೇ ಮರೆತಿಹೆವು
ಹೋದಲ್ಲಿ ಬಂದಲ್ಲಿ
ಹಾಯ್, ಹಲೋ ಎನ್ನುತಿಹೆವು

ಕನ್ನಡದ ಕಂಪಿಲ್ಲಿ
ಹೀಗಾದರೆ ಇನ್ನೆಲ್ಲಿ
ಕನ್ನಡವು ಇಂದು
ಕೇವಲ ಭಾಷಣಗಳಲ್ಲಿ
ಪುಸ್ತಕಗಳಲ್ಲಿ ಮಾತ್ರ ಬದುಕಿದೆ

ಎಲ್ಲರ ಮನೆ-ಮನಗಳಲ್ಲಿ
ಕನ್ನಡದ ದೀಪ ಹಚ್ಚಿರಲಿ
ನರನಾಡಿಗಳಲ್ಲಿ ಕನ್ನಡವೇ ತುಂಬಿರಲಿ
ಆಗ ಮಾತ್ರ ಕನ್ನಡವು ಉಳಿದು
ಬೆಳೆಯುವುದು ಇಲ್ಲಿ

– ಜಯಂತಿ ಎಂ ಎನ್


# ಕಾಡಿನ ರಹಸ್ಯ

**ಆರ್ ಮಾಧುರಿ**
8ನೆಯ ತರಗತಿ 'ಸಿ' ವಿಭಾಗ



ಒಂದು ಭಯಂಕರವಾದ ಕಾಡಿತ್ತು. ಆ ಕಾಡಿನ ಹೆಸರನ್ನು ಕೇಳಿದರೆ ಎಲ್ಲರಿಗೂ ಭೀತಿಯಾಗುತ್ತಿತ್ತು. ಆ ಕಾಡಿನ ದಾರಿಯಲ್ಲಿ ಯಾರು ಹೋಗುತ್ತಿರಲಿಲ್ಲ. ಆ ಕಾಡಿನಲ್ಲಿ ಕೆಲವರು ದೆವ್ವವಿದೆ ಎಂದು ನಂಬುತ್ತಿದ್ದರು. ಇನ್ನು ಕೆಲವರು ಅಲ್ಲಿ ಪ್ರಪಂಚದ ಎಲ್ಲಾ ಭಯಂಕರ ಪ್ರಾಣಿಗಳಿವೆ ಎಂದು ನಂಬುತ್ತಿದ್ದರು. ಆದರೆ ಆ ಕಾಡಿನಲ್ಲಿ ಒಬ್ಬ ಮಂತ್ರವಾದಿ ವಾಸಿಸುತ್ತಿದ್ದನು. ಅವನು ಆ ಕಾಡನ್ನು ವಶಪಡಿಸಿಕೊಳ್ಳಲು ಪ್ರತಿದಿನ ತರಾವರಿ ಪೂಜೆ ಮಾಡುತ್ತಿದ್ದನು. ಆ ಕಾಡಿನ ಹೆಸರನ್ನು ಕೇಳಿದರೆ ಎಲ್ಲರಿಗೂ ಭಯವಾಗುತ್ತಿತ್ತು.

ಹಿಂದೆ ಆ ಕಾಡು ಒಂದು ಸುಂದರವಾದ ಊರಾಗಿತ್ತು. ಆ ಊರಿನಲ್ಲಿ ವೀರೇಂದ್ರ ಮಹಾರಾಜನಿದ್ದನು. ಆತನ ಅರಮನೆಯಲ್ಲಿ ಸಾಕಷ್ಟು ಚಿನ್ನ, ಬೆಳ್ಳಿಯಿತ್ತು. ಆ ಅರಮನೆಯ ಪಕ್ಕದಲ್ಲಿ ಒಂದು ಪ್ರಾಣಿಗಿಂಡಿ ಇದ್ದಿತು. ಅದರ ಮೂಲಕ ಊರಿಗೆ ಬಂದು ಹೋಗುವ ಎಲ್ಲಾ ಪ್ರಾಣಿಗಳಿಗೆ ಮಹಾರಾಣಿ ಊಟ ತಿಂಡಿ ಕೊಡುತ್ತಿದ್ದಳು. ಆ ಊರಿನಲ್ಲಿದ್ದ ಮಾಂತ್ರಿಕನೊಬ್ಬ ಅದನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಅದೇ ಸಮಯಕ್ಕೆ ಮಹಾರಾಣಿಯು ಪ್ರಾಣಿಗಿಂಡಿಯ ಬಳಿ ಪ್ರಾಣಿಗಳಿಗೆ ಆಹಾರ ನೀಡುತ್ತಿರುವುದು ತಿಳಿಯುತ್ತದೆ. ಆಗ ಅವನು ಪ್ರಾಣಿಗಳಿಗೆ ನೀಡುವ ಆಹಾರದಲ್ಲಿ ವಿಷ ಬೆರೆಸುತ್ತಾನೆ. ಅದನ್ನು ತಿಂದ ಪ್ರಾಣಿಗಳೆಲ್ಲ ಸತ್ತು ಹೋದವು. ಆ ಕಾರಣಕ್ಕೆ ಪ್ರಾಣಿಗಳೆಲ್ಲಾ ಈ ಊರು ಕಾಡಾಗಲಿ ಎಂದು ಶಪಿಸುತ್ತವೆ. ಆದರೆ ಆ ಅರಮನೆಯಲ್ಲಿದ್ದ ಚಿನ್ನವೆಲ್ಲಾ ಇನ್ನು ಹಾಗೆ ಇದೆ. ಅದನ್ನು ಪಡೆಯಲು ಈಗಲೂ ಮಂತ್ರವಾದಿ ಪ್ರಯತ್ನಿಸುತ್ತಿದ್ದಾನೆ.



**ಹರ್ಷವರ್ಧಿನಿ**
7ನೆಯ ತರಗತಿ 'ಇ' ವಿಭಾಗ

**ಚಿತ್ರ ಕೃಪೆ: ಶ್ರೀಯಾ ಹೆಚ್ ಆರ್**
8ನೆಯ ತರಗತಿ 'ಇ' ವಿಭಾಗ





# ನನ್ನ ಕನಸಿನ ಪರಿಸರ

ಪರಿಸರವೆಂದರೆ ನನಗೆ ಮೊದಲು ನೆನಪಾಗುವುದು ಹಸಿರು ಗಿಡಮರಗಳು, ಪ್ರಾಣಿಗಳು, ಪಕ್ಷಿಗಳು, ಶುದ್ಧವಾದ ನೀರು ಮತ್ತು ಗಾಳಿ. ನನ್ನ ಕನಸಿನ ಪರಿಸರವೂ ಹೀಗೆ ಎಲ್ಲವನ್ನು ಒಳಗೊಂಡಿರಬೇಕೆಂದು ಬಯಸುತ್ತೇನೆ. ನನ್ನ ಕನಸಿನ ಪ್ರಕೃತಿಯಲ್ಲಿ ಮನೆಯ ಮುಂದೆ ಗಿಡಮರ, ಬೆಟ್ಟಗುಡ್ಡ, ನನ್ನ ಮೆಚ್ಚಿನ ಪ್ರಾಣಿಪಕ್ಷಿಗಳು ಹಾಗೂ ಹರಿಯುವ ನದಿಯಿರಬೇಕು. ನಮ್ಮ ಮನೆಯ ಸುತ್ತಮುತ್ತ ಹೆಚ್ಚು ವಾಹನಗಳು, ಕಟ್ಟಡಗಳು ಮತ್ತು ಕಾರ್ಖಾನೆಗಳು ಇರಬಾರದು. ಪರಿಸರ ಮಾಲಿನ್ಯ ಇಲ್ಲದಿರುವ ಒಂದು ಸ್ಥಳ ಬೇಕು. ಅದು ಶಾಂತವಾಗಿರಬೇಕು, ನಿಶ್ಶಬ್ದವಾಗಿರಬೇಕು. ನನಗೆ ಬರಿ ಪ್ರಾಣಿ-ಪಕ್ಷಿಗಳ ಧ್ವನಿಯೇ ಕೇಳಬೇಕು. ನಮ್ಮ ಮನೆಯ ಸುತ್ತಮುತ್ತಲೂ ಗದ್ದೆ, ತೋಟ ಮತ್ತು ಹೊಲಗಳು ಇರಬೇಕೆಂದು ಇಷ್ಟಪಡುತ್ತೇನೆ. ನನಗೆ ಆರೋಗ್ಯವಾದ ವಾತಾವರಣವಿರಬೇಕು.

ಇಂದಿನ ಕಾಲದಲ್ಲಿ ನನ್ನ ಕನಸು ಕನಸಾಗಿಯೇ ಉಳಿಯುತ್ತದೆ ಎಂಬ ಭಯ ನನ್ನನ್ನು ಕಾಡುತ್ತದೆ. ಏಕೆಂದರೆ ಜನರು ನಮ್ಮ ಪರಿಸರವನ್ನು ನಾಶಮಾಡುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳಾದ ನಾವು ಇದನ್ನು ನಮ್ಮ ಕರ್ತವ್ಯವೆಂದು ಭಾವಿಸಿ ನಮ್ಮ ಪರಿಸರವನ್ನು ರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಸ್ವತಃ ನಾವೇ ತೊಂದರೆಗಳನ್ನು ಸೃಷ್ಟಿಸುತ್ತೇವೆ. ಹೇಗೆ ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆಯೋ ಹಾಗೆ ನಮ್ಮ ಪರಿಸರ ನಮ್ಮ ಕೈಯಲ್ಲಿದೆ.



**ತನುಷ್ಕ ಎ**
7ನೆಯ ತರಗತಿ 'ಇ' ವಿಭಾಗ




**ಬಯಸಿದವರಿಗೆ 'ದಾರಿದೀಪ'**
**ಅಭ್ಯಾಸನಿರತರಿಗೆ 'ಮಾರ್ಗದರ್ಶಕ'**
**ಸಹೃದಯಿಗಳಿಗೆ 'ಆತ್ಮಸಂಗಾತಿ'**
**ಜ್ಞಾನದಾಹಿಗಳಿಗದುವೆ 'ಅಮೃತಪಾನ'**

**– ಕವಿತಾ ಎಂ ಎಸ್**

# ನನ್ನ ಕನಸು

ಚಿತ್ರ ಕೃಪೆ: ಅದಿತಿ ವಿ
8ನೆಯ ತರಗತಿ 'ಸಿ' ವಿಭಾಗ




ಒಂದು ದಿನ ನಾನು ನನ್ನ ಊಟವನ್ನು ತಿನ್ನುತ್ತಿದ್ದಾಗ ನಾನು ಎದ್ದು ಸ್ವಲ್ಪ ನೀರು ತರಲು ನನ್ನ ಅಡುಗೆ ಮನೆಗೆ ಹೋದೆ. ಅಲ್ಲಿ ಒಂದು ಈರುಳ್ಳಿ ಇನ್ನೊಂದು ಈರುಳ್ಳಿಯೊಂದಿಗೆ ಮಾತನಾಡುವುದನ್ನು ನೋಡಿದೆ. ನಂತರ ನಾನು ಈರುಳ್ಳಿಯ ಬಳಿಗೆ ಹೋಗಿ ನೀವು ಹೇಗೆ ಮಾತನಾಡುತ್ತೀರಿ? ಎಂದು ಕೇಳಿದೆ. ಅದರಲ್ಲಿ ಒಂದು ಈರುಳ್ಳಿಯು, "ನಾವು ತರಕಾರಿಗಳಾಗಿರುವುದರಿಂದ ನಾವೆಲ್ಲರೂ ಮಾತನಾಡಬಲ್ಲೆವು. ನಿಮಗೆ ಇದೂ ಗೊತ್ತಿಲ್ಲವೇ?" ಎಂದಿತು. ನಂತರ ಎಲ್ಲಾ ಈರುಳ್ಳಿಗಳು ನನ್ನನ್ನು ನೋಡಿ ನಗಲು ಪ್ರಾರಂಭಿಸಿದವು.

ನಂತರ ನಾನು ನನ್ನ ನೀರಿನ ಲೋಟವನ್ನು ತೆಗೆದುಕೊಂಡು ಅಲ್ಲಿಂದ ಹೊರಟೆ. ನನ್ನ ಲೋಟದ ಕಣ್ಣುಗಳನ್ನು ಮತ್ತು ಬಾಯನ್ನು ನೋಡಿದೆ. ನಾನು, "ನಿಮಗೆ ಕಣ್ಣುಗಳಿವೆಯಾ ಮತ್ತು ನೀವು ನಗಬಹುದಾ" ಎಂದು ಕೇಳಿದೆ. ಅದಕ್ಕೆ ಲೋಟ, "ನನಗೆ ಮೊದಲಿಂದಲೂ ಕಣ್ಣುಗಳಿದ್ದವು. ನಾನು ಯಾವಾಗಲೂ ನಗುತ್ತಿದ್ದೆ. ಆದರೆ ನೀವು ಅದನ್ನು ಗಮನಿಸಲಿಲ್ಲ." ಎಂದಿತು. ಅಷ್ಟರಲ್ಲಿ ನನ್ನ ಅಮ್ಮನ ಧ್ವನಿಯನ್ನು ಕೇಳಿ ನನಗೆ ಎಚ್ಚರವಾಯಿತು. ನನ್ನ ತಾಯಿ, "ಎದ್ದೇಳು, ನೀನು ಶಾಲೆಗೆ ಹೋಗಬೇಕು. ಈಗಾಗಲೇ ಏಳು ನಲವತ್ತೈದು ಆಗಿದೆ" ಎಂದರು. ಆಗ ನನಗೆ ಇದು ಕನಸೆಂದು ತಿಳಿಯಿತು.



ನಿಶ್ರಿತ ಎನ್ ಸ್ವಾಮಿ
6ನೆಯ ತರಗತಿ 'ಇ' ವಿಭಾಗ

ಚಿತ್ರ ಕೃಪೆ: ಸಂಗೀತಾ ಎಂ
9ನೆಯ ತರಗತಿ 'ಎ' ವಿಭಾಗ




# ಗುರುಕೃಪೆ

ಗುರು ಎಂಬುದು ನಾವೆಲ್ಲ ಸರ್ವೇಸಾಮಾನ್ಯವಾಗಿ ಕೇಳಿರುವ ಪದ. ಈ ಪದಕ್ಕೆ ನಾವೆಲ್ಲರೂ ಸುಲಭವಾಗಿ ನೀಡಿರುವ ಅರ್ಥ ಶಿಕ್ಷಕ, ಆದರೆ ಗುರು ಎಂದರೆ ಶಿಕ್ಷಕ ಮಾತ್ರವಲ್ಲ, ಗುರು ಎಂದರೆ ಕೇವಲ ಅಧ್ಯಾಪಕರಲ್ಲ, ಗುರು ಎಂದರೆ ಪ್ರಾಧ್ಯಾಪಕ ಮಾತ್ರವಲ್ಲ, ಬದಲಾಗಿ ಗುರು ಎಂಬ ಪದದ ನಿಜವಾದ ಅರ್ಥ ಇಂತಿದೆ: ಗು ಎಂದರೆ ಕತ್ತಲೆ, ಅಂಧಕಾರ, ಅಜ್ಞಾನ ಎಂದರ್ಥ. ಆದ್ದರಿಂದ ಗುರು ಎಂದರೆ ನಮ್ಮೊಳಗಿನ ಅಜ್ಞಾನದ ಅಂಧಕಾರವನ್ನು ದೂರ ಮಾಡುವವರು ಎಂಬುದು ಅರ್ಥವಾಗುತ್ತದೆ.

ಇಂತಹ ಗುರುಗಳು ನಮಗೆ ಎಲ್ಲಿ ನೋಡಬೇಕು ಎಂದು ತೋರಿಸುತ್ತಾರೆ, ಏನು ನೋಡಬೇಕೆಂದು ತೋರಿಸುವುದಿಲ್ಲ. ಏಕೆಂದರೆ ಅವರ ಪ್ರಕಾರ ನಾವು ನಮ್ಮ ಜೀವನದಲ್ಲಿ ಸದಾ ಸ್ವಾವಲಂಬಿಯಾಗಿ ಇರಬೇಕೆ ಹೊರತು ಅವಲಂಬಿಗಳಾಗಲ್ಲ. ಆದ್ದರಿಂದ ನಾವು ಗೊಂದಲದಲ್ಲಿ ಸಿಲುಕಿದಾಗ ನಮ್ಮ ಗುರುವಾದವರು ನಮಗೆ ಏನು ಮಾಡಬೇಕು ಎಂದು ಹೇಳಬೇಕು, ಕೇವಲ ಯಾವುದು ಸರಿ ಹಾಗೂ ಯಾವುದು ತಪ್ಪು ಎಂದು ತಿಳಿಸಿ ಆಯ್ಕೆ ಮಾಡಿ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿಯನ್ನು ನಮಗೆ ಬಿಡುವರು. ಮೊದಲಿಗೆ ಬೇಸರವನ್ನುಂಟು ಮಾಡಿದರೂ ಸಹ ಕಾಲಕ್ರಮೇಣ ನಾವು ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ, ಆತ್ಮಗೌರವಾನ್ವಿತ ಸಹಾನುಭೂತಿಯುಳ್ಳ ವ್ಯಕ್ತಿಗಳಾಗಿ ರೂಪಗೊಂಡಿರುತ್ತೇವೆ.

ಈ ಬದಲಾವಣೆ ನಮಗೆ ಕೆಲವೊಮ್ಮೆ ಅರಿವಿಲ್ಲದಂತೆಯೂ ನಮ್ಮ ಸುತ್ತಲಿನ ಜನರ ಮೇಲೆಯೂ ಸಹ ಸಕಾರಾತ್ಮಕವಾದ ಪರಿಣಾಮವನ್ನು ಬೀರುವುದು. ಆದ್ದರಿಂದ ನಾವೆಲ್ಲರೂ ಅಂತಹ ನಮ್ಮ ಗುರುಗಳನ್ನು ಹುಡುಕಿ ಅವರಿಂದ ಕಲಿಯಬೇಕು. ಅವರು ನಮ್ಮ ಸುತ್ತಮುತ್ತಲಿನಲ್ಲೇ ಇರುವರು. ನಮ್ಮ ತಂದೆ – ತಾಯಿ, ಶಿಕ್ಷಕರು, ಗೆಳೆಯ, ಗೆಳತಿ, ಅಣ್ಣ, ತಂಗಿ, ಅಕ್ಕ, ತಮ್ಮ ಯಾರಾದರೂ ಆಗಿರಬಹುದು. ಆದ್ದರಿಂದ ಹುಡುಕುವ ತಾಳ್ಮೆ ನಮ್ಮಲ್ಲಿರಬೇಕು ಇಂತಹ ಒಬ್ಬ ಗುರುವಿನ ಅವಶ್ಯಕತೆ ನಮ್ಮೆಲ್ಲರಿಗೂ ಇದೆ. ಆದರೆ ಹುಡುಕುವ ಆಸಕ್ತಿ ಹಾಗೂ ತಾಳ್ಮೆ ನಮಗೆ ಬೇಕಾಗಿದೆ. ಈಗ ಇದು ನಮ್ಮ ಕೈಯಲ್ಲಿದೆ. ನಮ್ಮನ್ನು ಯಾರು ಬದಲಾಯಿಸಲು ಸಾಧ್ಯವಿಲ್ಲ ಎಂಬುದು ಎಷ್ಟೇ ಸತ್ಯವಾದರೂ, ನಾವು ಬದಲಾಗಬೇಕು. ಅದು ಹೇಗೆ? ಎಂದು ಯೋಚಿಸಲು, ವಿಷಯ ನೀಡಲು ಗುರುಗಳು ಬೇಕು.



ಸೊಹಾನಿ
12ನೆಯ 'ಬಿ' ತರಗತಿ

ಸಂದರ್ಶನ - 1

ದಿನಾಂಕ: 17.8.2023

# ಸಾಧಕರ ಹೆಸರು: ಪದ್ಮಪ್ರಿಯಾ ಆರ್– 6ನೆಯ ತರಗತಿ 'ಸಿ' ವಿಭಾಗ



## ಸಂದರ್ಶನಕಾರರ ಹೆಸರು: ನಿಧಿ ಎನ್ ಮನೋಹರ್
## 6ನೆಯ ತರಗತಿ 'ಡಿ' ವಿಭಾಗ

1. ನಿಮ್ಮ ದೊಡ್ಡ ಶಕ್ತಿ ಯಾವುದು?
   ನನ್ನ ದೊಡ್ಡ ಶಕ್ತಿ ಟೆನ್ನಿಸ್.
2. ಪ್ರತಿದಿನ ಟೆನ್ನಿಸ್‌ಅನ್ನು ಎಷ್ಟು ಸಮಯ ಅಭ್ಯಾಸ ಮಾಡುತ್ತೀರಿ?
   ನಾನು ಪ್ರತಿದಿನ ಟೆನ್ನಿಸ್‌ಅನ್ನು ಐದು ಗಂಟೆಗಳ ಸಮಯ ಅಭ್ಯಾಸ ಮಾಡುತ್ತೇನೆ.
3. ಮೊದಲು ನಿಮಗೆ ಈ ಕ್ಷೇತ್ರದಲ್ಲಿ ಹೇಗೆ ಆಸಕ್ತಿ ಮೂಡಿತು?
   ಮೊಬೈಲ್‌ನಲ್ಲಿ ಟೆನ್ನಿಸ್ ಚಿತ್ರವನ್ನು ನೋಡಿದಾಗ ಅದರ ಬಗ್ಗೆ ನನಗೆ ಆಸಕ್ತಿ ಮೂಡಿತು.
4. ಇದರಲ್ಲಿ ನಿಮಗೆ ಯಾರು ಮಾರ್ಗದರ್ಶನ ನೀಡುತ್ತಿದ್ದಾರೆ?
   ಇದರಲ್ಲಿ ನನಗೆ 'ರಘುವೀರ್ ಟೆನ್ನಿಸ್ ಅಕಾಡೆಮಿ'ಯ ರಘುವೀರ್ ಸರ್ ಮತ್ತು ಪವನ್ ಸರ್ ಮಾರ್ಗದರ್ಶನ ನೀಡುತ್ತಿದ್ದಾರೆ.
5. ಶಾಲೆಯ ಅಭ್ಯಾಸ ಮತ್ತು ಟೆನ್ನಿಸ್ ಅಭ್ಯಾಸ ಎರಡಕ್ಕು ಹೇಗೆ ಸಮಯ ಹೊಂದಿಸಿಕೊಳ್ಳುವಿರಿ?
   ಮನೆಯಲ್ಲಿ ಶಾಲೆಯ ಅಭ್ಯಾಸಕ್ಕೆ 1 ಗಂಟೆ ಮತ್ತು ಟೆನ್ನಿಸ್‌ಗೆ 5 ಗಂಟೆಗಳ ಸಮಯ ನೀಡುತ್ತಿದ್ದೇನೆ.
6. ಈ ಆಟದಲ್ಲಿ ನಿಮಗೆ ಸ್ಫೂರ್ತಿ ಯಾರು?
   'ನೊವಾಕ್ ಜೊಕೋವಿಕ್' ಅವರು ನನ್ನ ಸ್ಫೂರ್ತಿಯಾಗಿದ್ದಾರೆ.
7. ಇದುವರೆಗೆ ದೊರೆತಿರುವ ಬಹುಮಾನಗಳು ಯಾವುವು?
   ಇದುವರೆಗೆ ನಾನು ಈ ಮುಂದಿನ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನು ಪಡೆದಿದ್ದೇನೆ.
   - ಮುಂಬೈನಲ್ಲಿ ನ್ಯಾಷನಲ್ ಟೆನ್ನಿಸ್
   - ಬೆಂಗಳೂರು ಮತ್ತು ವಿಶಾಖಪಟ್ಟಣಂನಲ್ಲಿ ನಡೆದ ಚಾಂಪಿಯನ್ ಶಿಪ್ ಸೀರೀಸ್
   - ಬೆಂಗಳೂರು ಮತ್ತು ಕೊಯಂಬತ್ತೂರಿನಲ್ಲಿ ನಡೆದ ಟ್ಯಾಲೆಂಟ್ ಸೀರೀಸ್
   - ಹೈದರಾಬಾದ್‌ನಲ್ಲಿ ನಡೆದ ನ್ಯಾಷನಲ್ ಸೀರೀಸ್ ಟೆನ್ನಿಸ್
8. ಮುಂದೆ ಯಾವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದೀರಿ?
   ನಾನು ಆಗಸ್ಟ್ 21 ರಂದು ಹೈದರಾಬಾದ್ ನಲ್ಲಿ ನಡೆಯುವ ನ್ಯಾಷನಲ್ ಸೀರೀಸ್ ಟೆನ್ನಿಸ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ.
9. ಕುಟುಂಬದವರು ಮತ್ತು ಶಾಲೆಯವರು ಹೇಗೆ ಸಹಾಯ ಮಾಡುತ್ತಿದ್ದಾರೆ?
   ನನ್ನ ಕುಟುಂಬದವರು ನನ್ನನ್ನು ಅಭ್ಯಾಸ ಸ್ಥಳಕ್ಕೆ ಸರಿಯಾದ ಸಮಯಕ್ಕೆ ಕರೆದುಕೊಂಡು ಹೋಗುತ್ತಾರೆ. ಮತ್ತು ಪುನಃ ಮನೆಗೆ ಕರೆದುಕೊಂಡು ಬರುತ್ತಾರೆ. ಸ್ಪರ್ಧೆಗಳು ನಡೆಯುವ ದಿನಗಳಲ್ಲಿ ಶಾಲೆಯವರು ರಜೆ ಕೊಡುವ ಮೂಲಕ ಸಹಾಯ ಮಾಡುತ್ತಿದ್ದಾರೆ.
10. ನಿಮಗೆ ಬೇರೆ ಯಾವ ಯಾವ ವಿಷಯಗಳಲ್ಲಿ ಆಸಕ್ತಿ ಇದೆ?
    ನನಗೆ ಟೆನ್ನಿಸ್ ಜೊತೆಗೆ ಹಾಡು, ನೃತ್ಯ, ಈಜು ಮತ್ತು ಬಾಸ್ಕೆಟ್ ಬಾಲ್‌ನಲ್ಲಿ ಆಸಕ್ತಿಯಿದೆ.
11. ನಿಮ್ಮ ಜೀವನದ ಗುರಿ ಏನು?
    ನನ್ನ ಜೀವನದ ಗುರಿ ಟೆನ್ನಿಸ್ ಆಟಗಾರ್ತಿ ಆಗುವುದು.
12. ನಿಮ್ಮ ಗುರಿಯನ್ನು ಸಾಧಿಸಲು ಕೈಗೊಂಡಿರುವ ಕ್ರಮಗಳೇನು?
    ನನ್ನ ಗುರಿಯನ್ನು ಸಾಧಿಸಲು ನಾನು ಸತತವಾಗಿ, ಆಸಕ್ತಿವಹಿಸಿ ಅಭ್ಯಾಸ ಮಾಡುತ್ತಿದ್ದೇನೆ.

ಸಂದರ್ಶನ - 2

ದಿನಾಂಕ: 23.08.2023

# ಸಾಧಕರ ಹೆಸರು: ವಿಭಾ ಪಿ ರವೀಂದ್ರ – 6ನೆಯ ತರಗತಿ 'ಇ' ವಿಭಾಗ



## ಸಂದರ್ಶನಕಾರರ ಹೆಸರು: ಅನ್ವೀಕ್ಷಾ ನಾಯಕ್
## 6ನೆಯ ತರಗತಿ 'ಇ' ವಿಭಾಗ

1. **ನಿಮ್ಮ ದೊಡ್ಡ ಶಕ್ತಿ ಯಾವುದು?**
ನನ್ನ ದೊಡ್ಡ ಶಕ್ತಿ ನನ್ನ ಅಮ್ಮ, ಅಪ್ಪ ಮತ್ತು ನನ್ನ ತಮ್ಮ. ಅವರು ನನಗೆ ಬೆಂಬಲ ನೀಡಿ ಯಾವಾಗಲೂ ಪ್ರೇರಣೆ ನೀಡುತ್ತಾರೆ.

2. **ಪ್ರತಿದಿನ ಕರಾಟೆಯನ್ನು ಎಷ್ಟು ಸಮಯ ಅಭ್ಯಾಸ ಮಾಡುತ್ತೀರಿ?**
ಪ್ರತಿದಿನ ಕರಾಟೆ ಮತ್ತು ಕಿಕ್ ಬಾಕ್ಸಿಂಗ್ ಅನ್ನು ಒಂದೂವರೆ ಗಂಟೆ ಅಭ್ಯಾಸ ಮಾಡುತ್ತೇನೆ.

3. **ಮೊದಲು ನಿಮಗೆ ಈ ಕ್ಷೇತ್ರದಲ್ಲಿ ಹೇಗೆ ಆಸಕ್ತಿ ಮೂಡಿತು?**
ಮೊದಲು ನನ್ನ ಅಪ್ಪ, ಅಮ್ಮ ಕರಾಟೆ ತರಗತಿಗೆ ಸೇರಿಸಿದರು. ಕೆಲವು ದಿನಗಳ ನಂತರ ನಾನು ಸ್ಪರ್ಧೆಯಲ್ಲಿ ಗೆದ್ದಾಗ ಹೆಚ್ಚು ಆಸಕ್ತಿ ಮೂಡಿತು.

4. **ನಿಮಗೆ ಯಾರು ಮಾರ್ಗದರ್ಶನ ನೀಡುತ್ತಿದ್ದಾರೆ?**
ನನಗೆ ಕರಾಟೆಯಲ್ಲಿ ಯೋಗೇಶ್ ಸರ್ ಮತ್ತು ಸುಧಾಕರ್ ಸರ್ ಮಾರ್ಗದರ್ಶನ ನೀಡುತ್ತಿದ್ದಾರೆ. ಹಾಗೆಯೇ ಕಿಕ್ ಬಾಕ್ಸಿಂಗ್ ನಲ್ಲಿ ಹರ್ಷ ಸರ್, ಅಂಜಲಿ ಮ್ಯಾಮ್ ಮತ್ತು ಸ್ಯಾಮ್ ಸರ್ ಮಾರ್ಗದರ್ಶನ ನೀಡುತ್ತಿದ್ದಾರೆ.

5. **ಶಾಲೆಯ ಅಭ್ಯಾಸದ ಜೊತೆಜೊತೆಗೆ ಕರಾಟೆ ಮತ್ತು ಕಿಕ್ ಬಾಕ್ಸಿಂಗ್ ಅಭ್ಯಾಸ ಎರಡಕ್ಕೂ ಹೇಗೆ ಸಮಯ ಹೊಂದಿಸಿಕೊಳ್ಳುವಿರಿ?**
ನಾನು ಕರಾಟೆ ಮತ್ತು ಕಿಕ್ ಬಾಕ್ಸಿಂಗ್ ಅನ್ನು 2 ಗಂಟೆಗಳ ಕಾಲ ಅಭ್ಯಾಸ ಮಾಡುತ್ತೇನೆ. ಉಳಿದ ಸಮಯವನ್ನು ಓದುವುದಕ್ಕೆ ಬಳಸುತ್ತೇನೆ.

6. **ನಿಮ್ಮ ಆದರ್ಶ ವ್ಯಕ್ತಿ ಯಾರು?**
ನನ್ನ ಆದರ್ಶ ವ್ಯಕ್ತಿ ಮೇರಿ ಕೋಮ್.

7. **ಇದುವರೆಗೆ ದೊರೆತಿರುವ ಬಹುಮಾನಗಳು ಯಾವುವು?**
   - ಇಂಡಿಯನ್ ಓಪನ್ ಇಂಟರ್ ನ್ಯಾಷನಲ್ ಕಿಕ್ ಬಾಕ್ಸಿಂಗ್ ಟೋರ್ನಮೆಂಟ್ (ನವ ದೆಹಲಿ)
   - ನ್ಯಾಷನಲ್ ಕಿಕ್‌ಬಾಕ್ಸಿಂಗ್ ಚಾಂಪಿಯನ್‌ಶಿಪ್ (ಕಲ್ಕತ್ತಾ)
   - ಇಂಟರ್‌ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್ (ಶಿವಮೊಗ್ಗ)
   - ನ್ಯಾಷನಲ್ ಕಿಕ್‌ಬಾಕ್ಸಿಂಗ್ ಚಾಂಪಿಯನ್‌ಶಿಪ್ (ಮಹಾರಾಷ್ಟ್ರ – ಪುಣೆ)

8. **ಮುಂದೆ ಯಾವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದೀರಿ?**
ಮುಂದೆ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ.

9. **ಕುಟುಂಬದವರು ಮತ್ತು ಶಾಲೆಯವರು ಹೇಗೆ ಸಹಾಯ ಮಾಡುತ್ತಿದ್ದಾರೆ?**
ನನ್ನ ಕುಟುಂಬದವರು ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೇರಣೆ ನೀಡುತ್ತಾರೆ. ಸಮಯಕ್ಕೆ ಸರಿಯಾಗಿ ಕರೆದುಕೊಂಡು ಹೋಗಿ ಬರುತ್ತಾರೆ. ಜೊತೆಗೆ ಅಭ್ಯಾಸ ಮಾಡಲು ಸಲಹೆ ನೀಡುತ್ತಾರೆ. ಶಾಲೆಯಲ್ಲಿ ಗೆಳತಿಯರು ನಾನು ಗೈರುಹಾಜರಾದಾಗ (ಆಬ್ಸೆಂಟ್) ನೋಟ್ಸ್ ಕೊಡುತ್ತಾರೆ. ಗೆದ್ದು ಬಂದಾಗ ಎಲ್ಲರು ಪ್ರಶಂಸಿಸಿ, ಹೆಮ್ಮೆಪಡುತ್ತಾರೆ.

10. **ನಿಮಗೆ ಬೇರೆ ಯಾವ ಯಾವ ವಿಷಯಗಳಲ್ಲಿ ಆಸಕ್ತಿ ಇದೆ?**
ಉಳಿದಂತೆ ನನಗೆ ಡ್ಯಾನ್ಸಿಂಗ್‌ನಲ್ಲಿ ಆಸಕ್ತಿಯಿದೆ.

11. **ನಿಮ್ಮ ಜೀವನದ ಗುರಿ ಏನು?**
ನನ್ನ ದೇಶವನ್ನು ಪ್ರತಿನಿಧಿಸಿ ಗೆಲ್ಲಬೇಕೆಂಬುದು ನನ್ನ ಜೀವನದ ಅತ್ಯುನ್ನತ ಗುರಿಯಾಗಿದೆ.

12. **ನಿಮ್ಮ ಗುರಿಯನ್ನು ಸಾಧಿಸಲು ಕೈಗೊಂಡಿರುವ ಕ್ರಮಗಳೇನು?**
   - ನಾನು ತುಂಬಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೇನೆ.
   - ಪ್ರತಿದಿನ ಅಭ್ಯಾಸ ಮಾಡುತ್ತಿದ್ದೇನೆ.
   - ಜಂಕ್ ಆಹಾರವನ್ನು ಬಿಟ್ಟು, ಆರೋಗ್ಯಯುತ ತಿನಿಸುಗಳನ್ನೇ ತಿನ್ನುತ್ತಿದ್ದೇನೆ.
   - ಅಭ್ಯಾಸ ಮಾಡಿದ ಮೇಲೆ ಕೋಚ್‌ಗಳಿಂದ (ತರಬೇತುದಾರರಿಂದ) ತಿದ್ದುಪಡಿಗಳನ್ನು ಕೇಳಿ ತಿಳಿಯುತ್ತೇನೆ.

ಸಂದರ್ಶನ - 3

ದಿನಾಂಕ: 22.08.2023

# ಸಾಧಕರ ಹೆಸರು: ಮುಂಜದಿರ ನಿರ್ವಿ ಪೂಣಚ – 6ನೆಯ ತರಗತಿ 'ಸಿ' ವಿಭಾಗ



## ಸಂದರ್ಶನಕಾರರ ಹೆಸರು: ಅಕ್ಷೇರ ಎಂ ಲೋಕೇಶ್
## 6ನೆಯ ತರಗತಿ 'ಎ' ವಿಭಾಗ

1. ನಿಮ್ಮ ದೊಡ್ಡ ಶಕ್ತಿ ಯಾವುದು?
ನನ್ನ ದೊಡ್ಡ ಶಕ್ತಿ ಈಜುವುದು.

2. ಪ್ರತಿದಿನ ಈಜುವುದನ್ನು ಎಷ್ಟು ಸಮಯ ಅಭ್ಯಾಸ ಮಾಡುತ್ತೀರಿ?
ನಾನು ಪ್ರತಿದಿನ ಈಜುವುದನ್ನು 6 ಗಂಟೆಗಳ ಸಮಯ ಅಭ್ಯಾಸ ಮಾಡುತ್ತೇನೆ.

3. ಮೊದಲು ನಿಮಗೆ ಈ ಕ್ಷೇತ್ರದಲ್ಲಿ ಹೇಗೆ ಆಸಕ್ತಿ ಮೂಡಿತು?
ಕುತೂಹಲದಿಂದ ನನಗೆ ಈಜುವುದರಲ್ಲಿ ಆಸಕ್ತಿ ಮೂಡಿತು.

4. ಇದರಲ್ಲಿ ನಿಮಗೆ ಯಾರು ಮಾರ್ಗದರ್ಶನ ನೀಡುತ್ತಿದ್ದಾರೆ?
ತುಳಸಿ ಸರ್ ಅವರು ನನ್ನ ಮಾರ್ಗದರ್ಶಕರಾಗಿದ್ದಾರೆ.

5. ಶಾಲೆಯ ಅಭ್ಯಾಸ ಮತ್ತು ಈಜುವ ಅಭ್ಯಾಸ ಎರಡಕ್ಕು ಹೇಗೆ ಸಮಯ ನೀಡುವಿರಿ?
6 ಗಂಟೆಗಳನ್ನು ಶಾಲೆಯ ಅಭ್ಯಾಸಕ್ಕೆ ಮತ್ತು 6 ಗಂಟೆಗಳನ್ನು ಈಜುವ ಅಭ್ಯಾಸ ಮಾಡುವುದಕ್ಕೆ ಸಮಯ ನೀಡುತ್ತಿದ್ದೇನೆ.

6. ನಿಮ್ಮ ಆದರ್ಶ ವ್ಯಕ್ತಿ ಯಾರು?
ಮಾನಾ ಪಟೇಲ್ ನನ್ನ ಆದರ್ಶ ವ್ಯಕ್ತಿಯಾಗಿದ್ದಾರೆ.

7. ಇದುವರೆಗೆ ದೊರೆತಿರುವ ಬಹುಮಾನಗಳು ಯಾವುವು?
ಇದುವರೆಗೆ 14 ಬಹುಮಾನಗಳು ದೊರೆತಿವೆ.

- 10 ಚಿನ್ನದ ಪದಕಗಳು
- 2 ಬೆಳ್ಳಿಯ ಪದಕಗಳು
- 2 ಕಂಚಿನ ಪದಕಗಳು

8. ಮುಂದೆ ಯಾವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದೀರಿ?
ಏಷಿಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುತ್ತಿದ್ದೇನೆ.

9. ಕುಟುಂಬದವರು ಮತ್ತು ಶಾಲೆಯವರು ಹೇಗೆ ಸಹಾಯ ಮಾಡುತ್ತಿದ್ದಾರೆ?
ನನ್ನ ಅಮ್ಮ ನಾನು ಈಜುಕೊಳಕ್ಕೆ ಹೋಗಿ ಅಭ್ಯಾಸ ಮಾಡಿ ಬರುವುದಕ್ಕೆ ಸಹಾಯ ಮಾಡುತ್ತಾರೆ. ಶಾಲೆಯಲ್ಲಿ ಗೆಳತಿಯರು ನಾನು ಶಾಲೆಗೆ ಬರದಿದ್ದಾಗ ನೋಟ್ ಪುಸ್ತಕಗಳನ್ನು ಪೂರ್ಣಗೊಳಿಸಲು ಸಹಾಯ ಮಾಡುತ್ತಾರೆ.

10. ನಿಮಗೆ ಬೇರೆ ಯಾವ ಯಾವ ವಿಷಯಗಳಲ್ಲಿ ಆಸಕ್ತಿ ಇದೆ?
ಈಜು ಬಿಟ್ಟರೆ ಟೆನ್ನಿಸ್‌ನಲ್ಲಿ ಆಸಕ್ತಿ ಇದೆ.

11. ನಿಮ್ಮ ಜೀವನದ ಗುರಿ ಏನು?
ನನ್ನ ಜೀವನದ ಗುರಿ ಒಲಂಪಿಕ್ಸ್‌ನಲ್ಲಿ ಆಡುವುದು.

12. ನಿಮ್ಮ ಗುರಿಯನ್ನು ಸಾಧಿಸಲು ಹೇಗೆ ಅಭ್ಯಾಸ ಮಾಡುತ್ತಿರುವಿರಿ?
ವಾರಕ್ಕೊಮ್ಮೆ ಶಾಲೆ ಮುಗಿಸಿ ಬೆಂಗಳೂರಿಗೆ ಹೋಗಿ ಈಜು ಅಭ್ಯಾಸ ಮಾಡುತ್ತೇನೆ. ಹಾಗೆಯೇ ಪ್ರತಿದಿನ ನನ್ನ ಮನೆಯ ಹತ್ತಿರ ಇರುವ ಈಜುಕೊಳದಲ್ಲಿ ಅಭ್ಯಾಸ ಮಾಡುತ್ತೇನೆ.

ವ್ಯಕ್ತಿ ಪರಿಚಯ:

## ಸಾಧಕರ ಹೆಸರು: ಸವಿಕಿರಣ್ ಹೊಳ್ಳ – 11ನೆಯ ತರಗತಿ 'ಬಿ' ವಿಭಾಗ



### ಸಂದರ್ಶನಕಾರರ ಹೆಸರು: ನೂಪುರ
### 7ನೆಯ ತರಗತಿ 'ಎ' ವಿಭಾಗ

'ಪರಿಶ್ರಮದಿಂದಲೇ ಎಲ್ಲವೂ ಸಾಧ್ಯ' ಎಂಬ ಮಾತಿನಂತೆ ಪರಿಶ್ರಮದಿಂದ ಮುನ್ನಡೆದು ಸಾಧನೆ ಮಾಡಿರುವ ಸವಿಕಿರಣ್ ಹೊಳ್ಳರವರ ಬಗ್ಗೆ ಇಂದು ತಿಳಿದುಕೊಳ್ಳೋಣ.

ಸವಿಕಿರಣ್ ಹೊಳ್ಳರವರ ಜನ್ಮಸ್ಥಳ ಮಂಗಳೂರು. ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ 11ನೆಯ ತರಗತಿಯಲ್ಲಿ ಓದುತ್ತಿದ್ದಾರೆ. ಇವರು ಎನ್‌ಸಿಸಿಯ ಶೂಟಿಂಗ್ ವಿಭಾಗದಲ್ಲಿ ಸಾಧನೆ ಮಾಡಿ ಚಿನ್ನ, ಬೆಳ್ಳಿ, ಕಂಚಿನ ಪದಕಗಳು, ಕೊಮೊಂಡೇಷನ್ ಕಾರ್ಡ್ ಇವೇ ಮೊದಲಾದ ಹಲವಾರು ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ಸವಿಯವರು "ನನ್ನ ದೊಡ್ಡ ಶಕ್ತಿ ಎಂದರೆ ನನ್ನ ತಂದೆ" ಎಂದು ಹೇಳಿಕೊಂಡರು. ಏಕೆಂದರೆ ಅವರು ಆಕೆಯನ್ನು ಬೆಂಬಲಿಸಿ ಶೂಟಿಂಗ್ ವಿಭಾಗದಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು. ಇವರ ತಾಯಿಯೇ ಇವರ ಆದರ್ಶ ವ್ಯಕ್ತಿ. ಅವರು ಸಮಯ ನಿರ್ವಹಣೆಯಲ್ಲಿ ನಿಪುಣರು. ಹಾಗಾಗಿ ಸವಿಕಿರಣ್ ಹೊಳ್ಳರವರಿಗೆ ಎನ್‌ಸಿಸಿ ಅಭ್ಯಾಸದ ಸಮಯ ಮತ್ತು ವಿದ್ಯಾಭ್ಯಾಸದ ಸಮಯವನ್ನು ನಿರ್ವಹಿಸಲು ಬಹಳ ಸಹಾಯ ಮಾಡುತ್ತಾರೆ. ಪ್ರತಿದಿನ ಕನಿಷ್ಠ ಒಂದು ಗಂಟೆಯ ಕಾಲ ಅಭ್ಯಾಸ ಮಾಡುತ್ತಾರೆ. ಹಾಗೂ ಸಮಯ ಸಿಕ್ಕರೆ ಕನಿಷ್ಠ ನಾಲ್ಕು ಗಂಟೆಗಳು ಮತ್ತು ಗರಿಷ್ಠ 6 ಗಂಟೆಗಳ ಕಾಲ ಅಭ್ಯಾಸ ಮಾಡುತ್ತಾರೆ. ಶೂಟಿಂಗ್ ಇವರ ಎರಡನೆಯ ಜೀವನವೆಂದರೂ ಸರಿ. ಶೂಟಿಂಗ್‌ಗಾಗಿ ಬಹಳ ಪರಿಶ್ರಮ ಪಡುತ್ತಿರುವ ಇವರು ನವೆಂಬರ್‌ನಲ್ಲಿ ನಡೆಯುವ ರಾಷ್ಟ್ರ ಮಟ್ಟದ 'ಶೂಟಿಂಗ್ ಇಂಡಿಯಾ' ಸ್ಪರ್ಧೆಯಲ್ಲಿ ಭಾಗವಹಿಸಲು ಅಭ್ಯಾಸ ಮಾಡುತ್ತಿದ್ದಾರೆ. ಇವರಿಗೆ ಮೊದಲು ಮಾರ್ಗದರ್ಶನ ನೀಡಿದ್ದು ಕೀರ್ತಿಸಿಂಗ್ ಬಿಷ್ಟ್‌ರವರು. ಶಾಲೆಯಲ್ಲಿ ಇವರ ಶಿಕ್ಷಕರು ಹಾಜರಾತಿ ನೀಡುವುದಷ್ಟೇ ಅಲ್ಲದೇ ಶಾಲಾ ಅವಧಿಯ ನಂತರವೂ ಪಾಠಗಳನ್ನು ಹೇಳಿಕೊಡುತ್ತಿದ್ದಾರೆ. ಕುಟುಂಬದವರು ಕೂಡ ಬೆಂಬಲಿಸಿ ಸಹಕರಿಸುತ್ತಾ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದಾರೆ.



## ಧನ್ಯವಾದಗಳು